ಬಾಪು ಪ್ರಪಂಚ

BAAPU PRAPANCHA

KANNADA - ENGLISH MONTHLY

ಡಿಸೆಂಬರ್-2017, ಜನವರಿ-ಫೆಬ್ರುವರಿ-2018




ಹಿರಿಯ ಚೇತನ, ಸಮಾಜಮುಖಿ ಡಾ॥ ಹೊ. ಶ್ರೀನಿವಾಸಯ್ಯ


ಸಂಸ್ಮರಣ ಗ್ರಂಥ ಮತ್ತು ಚಾರಿಟೆಬಲ್ ಟ್ರಸ್ಟ್ ಉದ್ಘಾಟನೆ




ಗಾಂಧಿ-ಅಂಬೇಡ್ಕರ್


ಸತ್ತಿದ್ದಾರೆಂದುಕೊಂಡವರು ಎದುರುಬದುರು ಆದಾಗ








ಎಲ್ಲರ ಮನೆಯಲ್ಲಿ ಇರಬೇಕಾದ ಪುಸ್ತಕಗಳು












ಗಾಂಧಿ ಭವನದಲ್ಲಿ ಮಾರಾಟಕ್ಕೆ ಲಭ್ಯ



ಬಾಪೂ ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಪತ್ರಿಕೆ

ಪ್ರಧಾನ ಸಂಪಾದಕರು
ಡಾ॥ ವೂಡೇ ಪಿ. ಕೃಷ್ಣ

ಸಲಹಾ ಸಮಿತಿ
ವಿ. ಎಸ್. ತಿಪ್ಪನಗೌಡ
ಇಂದಿರಾ ಕೃಷ್ಣಪ್ಪ
ಮಂಗ್ಳೂರ ವಿಜಯ

ಪ್ರಕಾಶಕರು
ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ
ಬೆಂಗಳೂರು-560 001

■
ಕಚೇರಿ ದೂರವಾಣಿ
080-23369234/23349755
■
ಈಮೇಲ್
gandhibhavanbangalore@gmail.com

ಆತ್ಮೀಯ ಓದುಗರೊಂದಿಗೆ.....

ಹೊಸ ವರ್ಷದಲ್ಲಿ ತಮ್ಮ ಕೈ ಸೇರುತ್ತಿರುವ 'ಬಾಪು ಪ್ರಪಂಚ' ಪತ್ರಿಕೆಯು ಸರ್ವರಲ್ಲಿ ಹೊಸ ಆಶಯವನ್ನು ಮೂಡಿಸಲಿ ಎಂದು ಆಶಿಸುತ್ತೇವೆ. 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನರಿಯಲಾಗದು' ಎಂಬ ಅಲ್ಲಮಪ್ರಭುವಿನ ವಚನೋಕ್ತಿಯಂತೆ, ಕಸ್ತೂರ್‌ಬಾ ಮತ್ತು ಬಾಪು ಅವರ ಮಹತ್ತರ ಹೆಜ್ಜೆ ಗುರುತುಗಳನ್ನು ಸ್ಮರಿಸಿಕೊಳ್ಳೋಣ.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಜನವರಿ ಮತ್ತು ಫೆಬ್ರವರಿ ಮಾಹೆಗಳು ಮಹತ್ತರ ಪರಿವರ್ತನೆಗೆ ತೆರೆದುಕೊಂಡ ತಿಂಗಳುಗಳು. ಗಾಂಧೀಜಿಯವರು ದ.ಆಫ್ರಿಕಾದಲ್ಲಿದ್ದಾಗ ಏಷ್ಯನ್ನರ ಬಲಾತ್ಕಾರದ ನೋಂದಾವಣೆ ವಿರುದ್ಧ ಪ್ರಥಮವಾಗಿ ಸತ್ಯಾಗ್ರಹವನ್ನು ಸಂಘಟಿಸಿದ್ದರು. ಪರಿಣಾಮವಾಗಿ ಜನವರಿ 1908ರಲ್ಲಿ ಅಲ್ಲಿನ ಸರ್ಕಾರ ಅವರನ್ನು ಬಂಧಿಸಿ, ಕೋರ್ಟಿನಲ್ಲಿ ಹಾಜರುಪಡಿಸಿತ್ತು. ವಿಚಾರಣೆ ನಡೆದು ಜೋಹಾನ್ಸ್‌ಬರ್ಗ್‌ನ ಸೆರೆಮನೆಗೆ ಅವರನ್ನು ದೂಡಿತ್ತು. ಈ ನಡೆ ಜನಸಾಮಾನ್ಯರ ಬದುಕಿನಲ್ಲಿ ಸಾಮಾಜಿಕ ತಲ್ಲಣ ಉಂಟು ಮಾಡುವ ಸರ್ಕಾರದ ನೀತಿಗಳ ವಿರುದ್ಧ ಗಾಂಧೀಜಿಯವರು ಮೊತ್ತ ಮೊದಲಿಗೆ ಜನಾಭಿಪ್ರಾಯವನ್ನು ರೂಪಿಸುವ ವ್ಯಾಪಕ ಚಳವಳಿಯನ್ನು ಹಮ್ಮಿಕೊಂಡದ್ದಾಗಿದೆ ಮತ್ತು ನ್ಯಾಯಾಲಯದ ಮೆಟ್ಟಿಲನ್ನೇರಿದ್ದಾಗಿದೆ ಹಾಗೂ ದ.ಆಫ್ರಿಕಾದಲ್ಲಿ ಮೊದಲ ಸೆರೆವಾಸವನ್ನು ಅನುಭವಿಸಿ ದ್ದಾಗಿದೆ. ಈ ಹೋರಾಟವು ಸುದೀರ್ಘವಾದ ಅವರ ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯ ಹೋರಾಟದ ಪ್ರಧಾನ ಪ್ರಥಮ ವೇದಿಕೆಯಾಗಿ ಅವರನ್ನು ಸಮಾಜಮುಖಿ ಜೀವನದೆಡೆಗೆ ಪಲ್ಲಟಗೊಳಿಸಿದ್ದನ್ನು ಕಾಣಬಹುದು.

ಹಾಗೆಯೆ, 1915ರ ಜನೆವರಿ ಒಂದರಂದು ಹೊಸ ಮನುಷ್ಯನಾಗಿ ಗಾಂಧೀಜಿ ಭಾರತಕ್ಕೆ ಹಿಂತಿರುಗಿದಾಗ, ಬಾ-ಬಾಪು ದಂಪತಿಗಳನ್ನು ಎದುರುಗೊಳ್ಳಲು ಅಂದಿನ ಬಾಂಬೆ ಗೌವರ್ನರ್ ಆಗಿದ್ದ ಲಾರ್ಡ್ ವೆಲ್ಲಿಂಗ್‌ಟನ್ ಅವರೇ ಆಗಮಿಸಿದ್ದರು. ಕಾಥೇವಾಡದ ದಿರಿಸಿನ ಬಾ-ಬಾಪು ದಂಪತಿಗಳನ್ನು ದಕ್ಷಿಣ ಆಫ್ರಿಕಾದಿಂದ ಬಂದ 'ಧೀರೋದಾತ್ತ ನಾಯಕಿ-ನಾಯಕರು' ಎಂಬಂತೆ ಬರಮಾಡಿಕೊಳ್ಳಲಾಯಿತು. ಅಂದು ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ಅಂದಿನ ಬ್ರಿಟಿಷ್ ಸರ್ಕಾರದ ಜೊತೆಗೂಡಿ ಅವರಿಗೆ 'ಕೈಸರ್-ಇ-ಹಿಂದ್' ಎಂಬ ಸನ್ಮಾನದ ಜೊತೆಗೆ ಚಿನ್ನದ ಪದಕವನ್ನು ಪ್ರದಾನ ಮಾಡಲಾಯಿತು. ಸೂಟು-ಬೂಟುಧಾರಿಯಾಗಿ ಲಂಡನ್-ದ.ಆಫ್ರಿಕಾಕ್ಕೆ ತೆರಳಿದ್ದ ಗಾಂಧೀಜಿ, ಅಪ್ಪಟ ದೇಸಿ ಉಡುಪಿನೊಂದಿಗೆ ಭಾರತಕ್ಕೆ ಆಗಮಿಸಿದ್ದರು. ಇದು ಅವರ ವ್ಯಕ್ತಿತ್ವ ಮತ್ತು ಚಿಂತನೆಯಲ್ಲಾದ ಮಹತ್ತರ ಬದಲಾವಣೆಯ ದ್ಯೋತಕವಾಗಿದೆ. ಅಂದಿನಿಂದಲೇ ಅವರ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆ ಅವರ ಮಾತಿನಂತೆ ಬಾ ಅವರೊಂದಿಗೆ 3ನೇ ದರ್ಜೆ ರೈಲುಬೋಗಿಯಲ್ಲಿ ಪ್ರಯಾಣಿಸಿ ಭಾರತವನ್ನು ಮತ್ತು ಜನಸಮುದಾಯವನ್ನು ಅರಿಯುವ ಪ್ರಯತ್ನ ಮಾಡಿದ್ದರು.

ಭಾರತದ ಜನಸಮುದಾಯದ ವೀಕ್ಷಣೆ-ಗ್ರಹಿಕೆ-ಮಂಥನದ ಆ ಮೌನ ವರ್ಷ ಭಾರತದ ಇತಿಹಾಸದ ಪರಿವರ್ತನೆಗೆ ಗಾಂಧೀಜಿಯವರನ್ನು ಸಜ್ಜುಗೊಳಿಸಿತ್ತು. ಫೆಬ್ರುವರಿ 1918ರಲ್ಲಿ ಅಹಮದಾಬಾದ್ ಮಿಲ್ ಕೂಲಿ ಕಾರ್ಮಿಕರ ಪರವಾಗಿ ಗಾಂಧೀಜಿಯವರು ಭಾರತದಲ್ಲಿ ಪ್ರಥಮವಾಗಿ ಮೂರು ದಿನಗಳ ಸತ್ಯಾಗ್ರಹವನ್ನು ಆರಂಭಿಸಿದ್ದರು. ತದನಂತರ, 1944ರ ಜನೆವರಿ-

ಫೆಬ್ರವರಿ ಮಾಹೆಗಳು ಗಾಂಧೀಜಿಯವರನ್ನು ಬಹುವಾಗಿ ವಿಚಲಿತಗೊಳಿಸಿದ್ದವು. ಆಗಾಖಾನ್ ಸೆರೆಮನೆಯಲ್ಲಿ ಕಸ್ತೂರಬಾ ಅವರಿಗೆ ಹೃದಯಾಘಾತ ವಾಯಿತು. ಬಾ ಅವರ ಆರೈಕೆಯಲ್ಲಿದ್ದ ಬಾಪೂಜಿಯ ಎದೆಗೊರಗಿ ಕುಳಿತ ಬಾ 'ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಲೇಬೇಕು ಎನ್ನುವಿರಾ? ಈ ಬೃಹತ್ ಭಾರತದಲ್ಲಿ ಅವರೂ ಸೇರಿದಂತೆ ನಾವೆಲ್ಲರೂ ಸಹೋದರರ ಹಾಗೆ ಇರಬಹುದಲ್ಲವೆ?' ಎಂದು ನೋವು-ಸಂಕಟದ ಧ್ವನಿಯಲ್ಲೇ ಪ್ರಶ್ನಿಸಿದ್ದರು. ಅದಕ್ಕೆ ಗಾಂಧೀಜಿಯವರು 'ನಮ್ಮನ್ನು ಆಳುವವರಾಗಿ ಮಾತ್ರ ಬ್ರಿಟಿಷರು ಭಾರತವನ್ನು ಬಿಡಲೇಬೇಕು ಎಂದು ಉತ್ತರಿಸಿದ್ದರು. ಇದರಲ್ಲಿ 'ಭಾರತದಲ್ಲಿ ಬ್ರಿಟಿಷರು ನಮ್ಮ ಸೋದರರಾಗಿ ಉಳಿಯುವುದಾದರೆ ಯಾವ ಅಭ್ಯಂತರ ಇಲ್ಲ' ಎಂಬ ಅವರ ಅಭಿಮತದಲ್ಲಿ ಭ್ರಾತೃತ್ವದ ಮಹಾನ್ ಆದರ್ಶ ಧ್ವನಿಸುತ್ತದೆ.

ಗಾಂಧೀಜಿಯವರ ಮಡಿಲಲ್ಲಿ ಬಾ ಕೊನೆಯುಸಿರೆಳೆದಾಗ ಮೌನಕ್ಕೆ ಸರಿದ ಬಾಪು, ಅದೇ ಸೆರೆಮನೆಯಲ್ಲಿನ ಅಂತಿಮ ಸಂಸ್ಕಾರದ ಸಮಯದಲ್ಲಿ 62 ವರ್ಷದ ಜೀವನ ಸಂಗಾತಿಯನ್ನು ಅಗ್ನಿ ದಹಿಸು ತ್ತಿರುವುದನ್ನು ಕಂಡು 'the best of me is dead' ಎಂದು ನೊಂದು ದು:ಖತಪ್ತರಾದರು. ಲಾರ್ಡ್ ವೇವಲ್‌ರಿಗೆ ಈ ಕುರಿತು ಪತ್ರ ಬರೆದು 'without my wishing it, she chose to lose herself in me and the result was that she became truly my better half' ಎಂದು ತಿಳಿಸಿದ್ದರು.

ಇಂಥ ಗಾಂಧೀಜಿಯವರನ್ನು ಪೂರ್ಣವಾಗಿ ಇಲ್ಲವಾಗಿಸುವ ಅಮಾನವೀಯ ಕೃತ್ಯವೊಂದು ನಡೆದದ್ದೂ 1948ರ ಜನವರಿ ತಿಂಗಳ 30ನೇ ದಿನಾಂಕದಂದು. ಗಾಂಧೀಜಿಯವರ ಸಹಬಾಳ್ವೆಯ, ಬಹುತ್ವದ ಆದರ್ಶವೇ ನಾಥೂರಾಮ್ ಗೋಡ್ಸೆ ಎಂಬ ಕುಬ್ಜ-ಕುತ್ಸಿತ ಮನಸ್ಸಿಗೆ ವಿಕೃತವಾಗಿ ಕಂಡು, ಗಾಂಧೀಜಿಯವರನ್ನು ಹತ್ಯೆಗೈಯಿಸಿತು. ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿತು.

ಜನವರಿ ತಿಂಗಳ ಮತ್ತೊಂದು ಮಹತ್ತರವಾದ ಘಟ್ಟ ಎಂದರೆ 1950ರ ಜನವರಿ 26ರಂದು ಭಾರತದ ಸಂವಿಧಾನವನ್ನು ಅನುಷ್ಠಾನ ಗೊಳಿಸಲು ಅಂಗೀಕರಿಸಿದ ದಿನ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶದ ಕಟ್ಟಕಡೆಯ ಪ್ರಜೆಯನ್ನು ಗುರಿಯಾಗಿಸಿಕೊಂಡು, ಸ್ವಾತಂತ್ರ್ಯ, ಸಮಾನತೆ, ಸೋದರತೆ, ಜಾತ್ಯತೀತತೆಯ ವಿಶ್ವಮಾನ್ಯವಾದ ಘನ ಆಶಯ ವನ್ನು ಭಾರತದ ಸಂವಿಧಾನದ ಆಶಯವಾಗಿ ರೂಪಿಸಿದ್ದಾರೆ. ಜನ ಸಾಮಾನ್ಯರು ಸಹೋದರರಂತೆ ಬಾಳುವ, ನಮಗಾರೂ ಶತೃಗಳಿಲ್ಲದಂತೆ ಬದುಕುವ ಆದರ್ಶಗಳು, ನಮ್ಮಲ್ಲಿ ಸದಾ ಸ್ಫೂರ್ತಿಯನ್ನು ತುಂಬಲಿ, ಮಹಾತ್ಮಾ ಗಾಂಧೀಜಿ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸುಗಳು ನಮ್ಮ ಹೃದಯದಲ್ಲಿ ಜಾಗೃತಿಯ ಬೆಳಕು ಬೀರಲಿ ಎಂದು ಆಶಿಸೋಣ.

–ಇಂದಿರಾ ಕೃಷ್ಣಪ್ಪ

ಗೌ॥ ಕಾರ್ಯದರ್ಶಿ, ಕ. ಗಾಂ.ಸ್ಮಾ.ನಿ., ಬೆಂಗಳೂರು

ಒಂದು ಪತ್ರ

ಮಾನ್ಯರೆ,

ಗಾಂಧೀಭವನದ ಗ್ರಂಥಾಲಯದಲ್ಲಿ 'ಬಾಪು ಪ್ರಪಂಚ' ಪತ್ರಿಕೆಯನ್ನು ಓದಿದೆ. ಇದರಲ್ಲಿ ಅನೇಕ ಉತ್ತಮ ಲೇಖನಗಳು ಇರುವುದನ್ನು ಗಮನಿಸಿದೆ. ಸಂತೋಷವಾಯಿತು. ಗೊತ್ತಿರದ ಅನೇಕ ಅಂಶಗಳನ್ನು ಇದರಲ್ಲಿ ನಾನು ಕಂಡೆ.

ವಿಚಾರಿಸಿದಾಗ, ಜನೆವರಿಯಲ್ಲಿ ಪತ್ರಿಕೆ ಬರಲಿಲ್ಲ ಎಂಬುದು ತಿಳಿಯಿತು. ದಯಮಾಡಿ ಇದನ್ನು ಪ್ರತಿ ತಿಂಗಳೂ ನಮ್ಮಂಥವರಿಗೆ ಒದಗಿಸಿ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಬೇಕಾಗಿ ವಿನಂತಿ.

ಎಂ. ಬಿ. ರಾಜಣ್ಣ, ಬೆಂಗಳೂರು



ಯುವಜನರನ್ನು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಬೇಕಿದೆ

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗಾಂಧೀಜಿಯವರ ಗ್ರಾಮೋದ್ಯೋಗ ನೀತಿಯನ್ನು ಕಡೆಗಣಿಸಿದ್ದರಿಂದ, ಬಡತನ ನಿರ್ಮೂಲನೆ ಸಾಧ್ಯವಾಗಿಲ್ಲ' ಎಂದು ಕೇಂದ್ರ ಸರ್ಕಾರದ ಯೋಜನಾ ಖಾತೆಯ ಮಾಜಿ ಸಚಿವ ಡಾ॥ ಎಂ.ವಿ. ರಾಜಶೇಖರನ್ ಅವರು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು, ಕರ್ನಾಟಕ ಖಾದಿ ಗ್ರಾಮೋ ದ್ಯೋಗ ಸಂಯುಕ್ತ ಸಂಘ ಮತ್ತು ಭಾರತ ಸೇವಾ ದಳ ಸಂಯುಕ್ತ ಆಶ್ರಯದಲ್ಲಿ ಗಾಂಧೀ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸರ್ವೋದಯ ದಿನಾಚರಣೆ' ಕಾರ್ಯಕ್ರಮದ ಉದ್ಘಾಟನೆಯನ್ನು ಅವರು ಮಾಡಿ, ಮಾತನಾಡಿದರು.

ನಮ್ಮ ದೇಶದಲ್ಲಿ ಇಂದು 45%ರಷ್ಟು ಯುವಜನರು ಇದ್ದಾರೆ. ಇದು ಇಡೀ ವಿಶ್ವದ ಗಮನ ಸೆಳೆದುಕೊಂಡಿದೆ. ಈ ಯುವಜನ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕಾರ್ಯ ನಡೆಯಬೇಕು. ಇದು ನಮ್ಮೆಲ್ಲರ ಜವಾಬ್ದಾರಿ. ಯುವಜನರಿಗೆ ವಿವಿಧ ವೃತ್ತಿ ಕೌಶಲ್ಯಗಳಲ್ಲಿ ತರಬೇತಿ ನೀಡಿ, ಅವರನ್ನು ರಚನಾತ್ಮಕ ಮತ್ತು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿಸಬೇಕಿದೆ.

ಭಾರತವು ವಿಶ್ವದಲ್ಲೇ ಶಾಂತಿಪಾಲನೆಯಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಇದಕ್ಕೆ ಗಾಂಧೀಜಿಯವರ ಕೊಡುಗೆ ಅಪಾರವಾದುದು. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಬಂಗಾಳ ಪ್ರಾಂತದಲ್ಲಿ ಕೋಮುದಂಗೆ ಕಾಣಿಸಿಕೊಂಡಾಗ, ಅವರು ಅಲ್ಲಿಗೆ ಧಾವಿಸಿದರು. ಸತ್ಯಾಗ್ರಹವನ್ನು ಕೈಗೊಂಡರು. ಸಹಿಷ್ಣುತೆಯನ್ನು ಮನಗಾಣಿಸಿ ಕೊಟ್ಟರು. ಹಿಂಸಾಚಾರದಿಂದ ಏನನ್ನೂ ಸಾಧಿಸಲು ಆಗುವುದಿಲ್ಲ ಎಂಬುದನ್ನು ತಿಳಿಸಿದರು. ಎಂದು ವಿವರಿಸಿದರು.

ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಮೇಲೆ ಎಲ್ಲಾ ಸದಸ್ಯ ರಾಷ್ಟ್ರಗಳ ಧ್ವಜಗಳು ಹಾರಾಡುತ್ತಿರುತ್ತವೆ. ಯಾವುದಾದರೂ ಸದಸ್ಯ ರಾಷ್ಟ್ರದ ಅಧ್ಯಕ್ಷರು, ಪ್ರಧಾನಿ ನಿಧನರಾದಾಗ, ಅವರಿಗೆ ಗೌರವ ಸಲ್ಲಿಸಲು ಆ ರಾಷ್ಟ್ರದ ಧ್ವಜವನ್ನು ಅರ್ಧಕ್ಕೆ ಒಂದು ದಿನ ಇಳಿಸಲಾಗುತ್ತದೆ. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿತ್ತು.

ಆದರೆ, 1948ರಲ್ಲಿ ಜನವರಿ 30ರಂದು ಭಾರತದಲ್ಲಿ ಗಾಂಧೀಜಿಯವರ ಹತ್ಯೆ ನಡೆದಾಗ, ಅವರಿಗೆ ಗೌರವ ಸಲ್ಲಿಸಲು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಮೇಲೆ ಹಾರಾಡುತ್ತಿದ್ದ ಭಾರತದ ಧ್ವಜವನ್ನು ಮಾತ್ರ ಅರ್ಧಕ್ಕೆ ಇಳಿಸದೆ, ಎಲ್ಲಾ ರಾಷ್ಟ್ರಗಳ ಧ್ವಜಗಳನ್ನು ಅರ್ಧಕ್ಕೆ ಇಳಿಸಲಾಯಿತು. ವಿಶ್ವವು ಗಾಂಧೀಜಿಯವರನ್ನು ಅರ್ಥ ಮಾಡಿಕೊಂಡಿದ್ದ ಮತ್ತು ಅವರಿಗೆ ಗೌರವ ಸಲ್ಲಿಸಲು ಆಯ್ಕೆ ಮಾಡಿಕೊಂಡ ಅಪೂರ್ವ ರೀತಿ ಇದಾಗಿತ್ತು ಎಂಬುದನ್ನು ತಿಳಿಸಿದ ಅವರು, ಗಾಂಧೀಜಿ ಕೇವಲ ಭಾರತಕ್ಕೆ ಸೇರಿದವರಲ್ಲ; ಅವರು ಇಡೀ ವಿಶ್ವಕ್ಕೆ ಸೇರಿದವರು' ಎಂದು ನೆನಪಿಸಿದರು.

ನನಗೀಗ 91 ವರ್ಷ. ಆದರೂ ಗಾಂಧೀಜಿಯವರ ವಿಷಯ ಕುರಿತು ಮಾತನಾಡಲು ನನಗೆ ಅಪಾರ ಆಸಕ್ತಿ, ಶ್ರದ್ಧೆ. ಅವರ ಜೀವನ ಮತ್ತು ಹೋರಾಟದ ಬಗ್ಗೆ ಹೇಳುವಾಗ ನನಗೆ ರೋಮಾಂಚನ ವಾಗುತ್ತದೆ ಎಂದ ಡಾ। ರಾಜಶೇಖರನ್ ಕಾರ್ಯಕ್ರಮದಲ್ಲಿ ಕುಳಿತುಕೊಂಡು ಮಾತನಾಡಲು ಇಚ್ಛಿಸದೆ, ಪೋಡಿಯಂ ಬಳಿ ಬಂದು ನಿಂತುಕೊಂಡೇ 20 ನಿಮಿಷಕಾಲ ಮಾತನಾಡಿದ್ದು, ಸೇರಿದ್ದ ವಿದ್ಯಾರ್ಥಿ-ವಿದ್ಯಾರ್ಥಿನಿ ಮತ್ತು ಯುವಜನರ ಹೃದಯಕ್ಕೆ ತಟ್ಟಿತು.

ನಾವು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದ್ದೇವೆ. ನೂರಾರು ಕ್ಷಿಪಣಿಗಳನ್ನು ಹಾರಿ ಬಿಟ್ಟಿದ್ದೇವೆ. ಆದರೆ, ಈ ಲೋಕದಲ್ಲಿ ನಮ್ಮ ಸಹಮಾನವರ ಜೊತೆಗೆ ಸೌಹಾರ್ದಯುತವಾಗಿ

ಸರ್ವೋದಯ ದಿನ ಪ್ರತಿಜ್ಞೆ

ಭಾರತ ಇಂದು ಡೋಲಾಯಮಾನ ಪರಿಸ್ಥಿತಿಯಲ್ಲಿದೆ. ಒಂದೆಡೆ ಮಾನವೀಯ ಮೌಲ್ಯಗಳ ಅಧಃಪತನ, ಮತ್ತೊಂದೆಡೆ ಧರ್ಮಾಂಧತೆ, ಭ್ರಷ್ಟಾಚಾರ, ಆರ್ಥಿಕ ಅಸಮಾನತೆ, ವಿದೇಶಿ ಸಂಸ್ಕೃತಿಗಳ ಅಂಧಾನುಕರಣೆ ಕಾಣುತ್ತಿದೆ. ಈ ಸಂದಿಗ್ಧ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ರೂಪಿಸಿದ ತತ್ವ-ಆದರ್ಶಗಳು ಅತ್ಯಂತ ಪ್ರಸ್ತುತವಾಗಿವೆ. ಗಾಂಧಿಯವರ ವಿಚಾರದಲ್ಲಿ ನಿಷ್ಠೆಯುಳ್ಳ ನಾವು ದೇಶದ ಜನತೆಯ ಹೃನ್ಮನದಲ್ಲಿ, ಸಂಸ್ಥೆಗಳಲ್ಲಿ ಹಾಗೂ ಸಾರ್ವಜನಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಗಾಂಧೀಜಿ ಪ್ರತಿಪಾದಿಸಿದ ಸತ್ಯ, ಅಹಿಂಸೆ, ಅಸ್ತೇಯ ಬ್ರಹ್ಮಚರ್ಯ, ಅಸಂಗ್ರಹ, ಸರ್ವಧರ್ಮ ಸಮಭಾವ, ಸ್ವದೇಶಿ, ಕೋಮುಸಾಮರಸ್ಯ, ಅಸ್ಪೃಶ್ಯತಾ ನಿವಾರಣೆ, ಅಂತ್ಯೋದಯ ಇತ್ಯಾದಿ ಮೌಲ್ಯಗಳನ್ನು ಆಚರಣೆಗೆ ತರುವುದು ಕರ್ತವ್ಯವಾಗಿದೆ.

ಹುತಾತ್ಮ ಗಾಂಧೀಜಿ ಅವರ ಸಂಸ್ಮರಣೆಯ ಸರ್ವೋದಯ ದಿನವಾದ ಇಂದು ನಾವೆಲ್ಲಾ ಒಗ್ಗೂಡಿ ಮನಃಪೂರ್ವಕವಾಗಿ ಅವರ ತತ್ವ-ವಿಚಾರಗಳ ಪ್ರಸಾರಕ್ಕಾಗಿ ಶ್ರಮಿಸುತ್ತೇವೆಂದು ಹಾಗೂ ನಮ್ಮ ನಿತ್ಯ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುತ್ತೇವೆಂದು ಈ ದಿನ ಎಲ್ಲರ ಸಮ್ಮುಖದಲ್ಲಿ ಪ್ರತಿಜ್ಞೆ ಮಾಡುತ್ತೇವೆ.

India of my dream

I shall work for an India
* in which the poorest shall feel that this is his or her country
* in whose making they have an effective voice
* in which there shall be no high or low class of people
* in which all communities shall live in perfect harmony
* in which there will be no room for the curses of untouchability/intoxicating drinks & drugs
* in which women will enjoy the same rights as men
* in which there will be peace in the rest of the world.

Gandhiji

ಬದುಕುವುದು ಹೇಗೆ ಎಂಬುದನ್ನು ನಾವು ಇನ್ನೂ ಕಲಿಯಬೇಕಾಗಿದೆ. ನಮ್ಮ ಸಮಾಜವನ್ನು ಇನ್ನೂ ಬಡತನ, ಅಸಮಾನತೆ, ಅನಕ್ಷರತೆ, ಮೂಢನಂಬಿಕೆ, ಅಸ್ಪೃಶ್ಯತೆ ಕಾಡುತ್ತಿವೆ; ಸಾಮಾಜಿಕ ಮೌಲ್ಯಗಳು ಪಾತಾಳಕ್ಕೆ ಇಳಿದಿವೆ ಎಂದು ವಿಷಾದಿಸಿದ ಅವರು, ಈ ಕುರಿತು ನಾವು ಗಂಭೀರವಾಗಿ ಆಲೋಚನೆ ಮಾಡಿ, ನಮ್ಮ ನಡೆಯನ್ನು ತಿದ್ದಿಕೊಳ್ಳಬೇಕಿದೆ ಎಂದು ಕಿವಿಮಾತು ಹೇಳಿದರು.

ಇದಕ್ಕೂ ಮೊದಲು ಆನಂದರಾವ್ ವೃತ್ತದಲ್ಲಿನ ಗಾಂಧೀಜಿ ಪ್ರತಿಮೆಯಿಂದ ವಿದ್ಯಾರ್ಥಿ-ಯುವಜನರು ಮೆರವಣಿಗೆಯಲ್ಲಿ ಗಾಂಧೀ ಭವನಕ್ಕೆ ಬಂದಿದ್ದರು. ಅವರು 'ಗಾಂಧೀಜಿಗೆ ಸಾವಿಲ್ಲ', 'ಗಾಂಧೀಜಿ ಚಿರಾಯು', 'ಗಾಂಧೀಜಿ ನಮ್ಮ ಹೃದಯದಲ್ಲಿ ಇದ್ದಾರೆ', 'ನಾವು ಮನುಷ್ಯರು, ಗಾಂಧೀವಾದಿಗಳು', 'ಎಲ್ಲಾ ಭಾರತೀಯರನ್ನು ಒಗ್ಗೂಡಿಸಿ' ಎಂಬ ಫಲಕಗಳನ್ನು ಹಿಡಿದಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ 'ಸರ್ವೋದಯ ದಿನ ಪ್ರತಿಜ್ಞೆ'ಯನ್ನು ಶ್ರೀ ನರಸಿಂಹಯ್ಯ ಅವರು ಬೋಧಿಸಿದರು. ಎಲ್ಲರೂ ಪ್ರತಿಜ್ಞೆಯನ್ನು ಕೈಗೊಂಡರು. (ಬಾಕ್ಸ್‌ನಲ್ಲಿದೆ).

ಗಾಂಧೀಜಿಯವರ ಕನಸು' ಹೇಳಿಕೆಯನ್ನು ಶೇಷಾದ್ರಿ ಪುರಂ ಕಾಲೇಜಿನ 2ನೇ ಬಿಕಾಂ ತರಗತಿಯ 'ಎ' ವಿಭಾಗದ ವಿದ್ಯಾರ್ಥಿ ಸಂದೀಪ್ ಓದಿದರು.(ಬಾಕ್ಸ್‌ನಲ್ಲಿದೆ)

ಕಾರ್ಯಕ್ರಮದಲ್ಲಿ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶ್ರೀ ಎಚ್.ಸಿ.ರುದ್ರಪ್ಪ, ತುಮಕೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ|| ಓ.ಅನಂತರಾಮಯ್ಯ, ಶ್ರೀ ನರಸಿಂಹಯ್ಯ ಮುಂತಾದವರು ಮಾತನಾಡಿದರು. ಸ್ವಾತಂತ್ರ್ಯ ಹೋರಾಟಗಾರರ ಸಂಘದ ಶ್ರೀ ಶಾಸ್ತ್ರಿ, ಪಂಚಾಯತ್ ರಾಜ್ ಇಲಾಖೆಯ ಒಂಬುಡ್ಸ್ ಮನ್ ಶ್ರೀ ಎಸ್.ಆರ್.ಖುರೇಷಿ ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ|| ವೂಡೇ ಪಿ. ಕೃಷ್ಣ ಅವರು ' ಗಾಂಧೀಜಿ ಹತ್ಯೆಯಾದ ದಿನವನ್ನು ಇಡೀ ಪ್ರಪಂಚದಲ್ಲಿ 'ಸರ್ವೋದಯ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಗಾಂಧೀಜಿ ನಮಗೆ ನೀಡಿದ ಮೌಲ್ಯಗಳನ್ನು ನಾವು ವಿದ್ಯಾರ್ಥಿ-ಯುವಜನರಿಗೆ ತಲುಪಿಸುವ ಅವಶ್ಯಕತೆ ಇದೆ. ಈ ಕಾರ್ಯದಲ್ಲಿ ಕೆಲಸ ಮಾಡುತ್ತಿರುವ ಗಾಂಧೀ ಸ್ಮಾರಕ ನಿಧಿಗೆ ಎಲ್ಲರ ಸಲಹೆ, ಸಹಕಾರಗಳು ಬೇಕು; 'ಸಿ.ಪಿ.ಯು' ಎಂಬ ಮೂರು ತತ್ವಗಳ ಕಡೆಗೆ ನಾವು ಹೆಚ್ಚಿನ ಗಮನ ನೀಡುವ ಮೂಲಕ ಗಾಂಧೀಜಿ ಆಶಯವನ್ನು ಪ್ರಸಾರ ಮಾಡಬೇಕಿದೆ. ಸಿ ಎಂದರೆ ಕಮ್ಯುನಲ್ ಹಾರ್ಮನಿ(ಕೋಮು ಸೌಹಾರ್ದ), ಪಿ ಎಂದರೆ ಪ್ರೊಹಿಬಿಷನ್(ಮದ್ಯ ನಿಷೇಧ) ಮತ್ತು ಯು ಎಂದರೆ ಅನ್‌ಟಚೆಬಿಲಿಟಿ(ಅಸ್ಪೃಶ್ಯತೆ). ಕೋಮು ಸೌಹಾರ್ದವನ್ನು ಕಾಪಾಡಿಕೊಳ್ಳಬೇಕು; ಮದ್ಯ ಮತ್ತು ಅಸ್ಪೃಶ್ಯತೆಗಳನ್ನು ಓಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಮುನ್ನ ಎಲ್ಲರನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಶ್ರೀಮತಿ ಇಂದಿರಾ ಸ್ವಾಗತಿಸಿದರು. ಸಹ ಕಾರ್ಯದರ್ಶಿ ಮಂಗ್ಳೂರ ವಿಜಯ ಕಾರ್ಯ ಕ್ರಮ ನಿರೂಪಣೆ ಮಾಡಿದರು.

ಉಪಾಧ್ಯಕ್ಷರಾದ ಪ್ರೊ| ಜಿ.ಬಿ.ಶಿವರಾಜ್ ಹಾಗೂ ಶ್ರೀ ತಿಪ್ಪನಗೌಡ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

■

ಸರ್ವೋದಯ ದಿನದ ಕಾರ್ಯಕ್ರಮಗಳು

ಸರ್ವೋದಯ ಎಂದರೆ ಎಲ್ಲರ ಉದಯ. ಒಬ್ಬರ ಉದಯ ಆಗುವುದಕ್ಕೆ ಇನ್ನೊಬ್ಬರ ಬದುಕು ಅಸ್ತವಾಗತಕ್ಕದ್ದಲ್ಲ. ಸರ್ವೋದಯ ಮಂತ್ರವನ್ನು ನಮಗೆ ಗಾಂಧೀಜಿ ಕೊಟ್ಟರು. ವಿವೇಕ ದಿಂದ ಕೂಡಿದ ಸಮತ್ವ ದೃಷ್ಟಿಯೇ ಸರ್ವೋದಯ. ಸತ್ಯ ಮತ್ತು ಅಹಿಂಸೆಗಳ ಮೇಲೆ, ವರ್ಗಭೇದ-ಮತಭೇದ-ಶೋಷಣೆ ಇಲ್ಲದ ಸಮಾಜ ರಚನೆಯೇ ಸರ್ವೋದಯದ ಗುರಿ.

ಆತ್ಮಜ್ಞಾನ ಮತ್ತು ವಿಜ್ಞಾನಗಳ ಸಮ್ಮಿಳನ ನಡೆದು, ಸರ್ವೋದಯ ಆಗತಕ್ಕದ್ದು. ವಿಜ್ಞಾನವು ಸುಖ-ಉಪಯುಕ್ತ ಬದುಕಿನತ್ತ ಕರೆದೊಯ್ಯುವುದೇನೋ ಸರಿ; ಆದರೆ ಅದು ಹಿಂಸೆಯತ್ತ ಕೂಡ ವಿಶ್ವವನ್ನು ಕರೆದೊಯ್ಯಬಲ್ಲದು. ಆದರೆ, ಆತ್ಮಜ್ಞಾನವು ಸದಾ ಅಹಿಂಸೆಯತ್ತಲೇ ಕರೆದೊಯ್ಯುವುದು. ಆದ್ದರಿಂದ ವಿಜ್ಞಾನ ಮತ್ತು ಆತ್ಮಜ್ಞಾನ ಒಗ್ಗೂಡಿ ವಿಶ್ವದಲ್ಲಿ ಎಲ್ಲರಿಗೂ ಸಹ್ಯವಾದ ಬದುಕನ್ನು ಒದಗಿಸತಕ್ಕದ್ದು.

ಸರ್ವೋದಯದಲ್ಲಿ ಸಮನ್ವಯವು ಸೇರಿಕೊಂಡಿದೆ. ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಸರ್ವೋದಯ ತತ್ವಕ್ಕೆ ಇದೆ. ಅದು ಅತ್ಯಂತ ವ್ಯಾಪಕವಾದುದು. ಲೋಕದ ಧರ್ಮಗಳೆಲ್ಲವೂ ಈ ಸರ್ವೋದಯ ತತ್ವವನ್ನೇ ಅಳವಡಿಸಿಕೊಂಡಿವೆ. ಸರ್ವೋದಯ ಮಾರ್ಗ ಸತ್ಯ, ಸಂಯಮ, ಸೇವೆಗಳದ್ದು.

ಶಿವಮೊಗ್ಗ ಜಿಲ್ಲಾ ಕೇಂದ್ರದಲ್ಲಿ ಸರ್ವೋದಯ ಕಾರ್ಯಕ್ರಮ

ಗಾಂಧೀಜಿಯವರ ಹಿಂದೂ ಧರ್ಮದಲ್ಲಿ ಎಲ್ಲರ ಬಗ್ಗೆ ಪ್ರೀತಿ-ವಿಶ್ವಾಸ-ಗೌರವಗಳು ಇದ್ದವು. ಅವರು ಭಗವದ್ಗೀತೆ, ಕುರ್‌ಆನ್, ಬೈಬಲ್ ಇತ್ಯಾದಿ ಎಲ್ಲಾ ಧರ್ಮ ಗ್ರಂಥಗಳ ಬಗ್ಗೆ ಅಪಾರ ಗೌರವ ನೀಡುವವರು. ಸರಳತೆ, ಸತ್ಯ ಮತ್ತು ಅಹಿಂಸೆ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾವು ಅವರಿಗೆ ನೈಜ ಶ್ರದ್ಧಾಂಜಲಿ ಸಲ್ಲಿಸಬೇಕು ಎಂದು ಪತ್ರಕರ್ತ, ಅಂಕಣಕಾರ ಶ್ರೀ ಎಂ.ಎನ್.ಸುಂದರರಾಜ್ ಅವರು ತಿಳಿಸಿದರು.

ಅವರು ಗಾಂಧೀ ಬಸಪ್ಪ ಮತ್ತು ಹಳದಮ್ಮ ಪ್ರತಿಷ್ಠಾನ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದಲ್ಲಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಸರ್ವೋದಯ ದಿನಾಚರಣೆ, ಗಾಂಧೀ ವಿಚಾರಧಾರೆ, ಸರ್ವಧರ್ಮ ಸಮನ್ವಯ ಸಭೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇನ್ನೊಬ್ಬ ಉಪನ್ಯಾಸಕ ಶ್ರೀ ಮೊಹಮ್ಮದ್ ಇಲಿಯಾಸ್ ಶೇಖ್ ಅವರು, ಗಾಂಧೀಜಿಯವರು 'ವಿಶ್ವದ ಒಳಿತು ನಮ್ಮೆಲ್ಲರ ಒಳಿತು; ವಿಶ್ವದ ಕೆಡುಕು ನಮ್ಮೆಲ್ಲರ ಕೆಡುಕು' ಎಂದು ತಿಳಿಸಿದರು. ಎಲ್ಲರೂ ಪ್ರೀತಿ-ಸಾಮರಸ್ಯದಿಂದ ಸಹಬಾಳ್ವೆ ನಡೆಸಬೇಕು ಎಂದು ತಿಳಿಸಿದ್ದರು. ಇಂದು ಎಲ್ಲೆಡೆ ಅಶಾಂತಿ, ಕೋಮುವೈಷಮ್ಯ ಹಬ್ಬುತ್ತಿರುವಾಗ, ಗಾಂಧೀಜಿ ತಿಳಿಸಿದ ತತ್ವಗಳನ್ನು ನಾವೆಲ್ಲರೂ ಮನಃಪೂರ್ವಕವಾಗಿ ಅನುಸರಿಸುವ ತುರ್ತು ಇದೆ; ಗಾಂಧೀಜಿಯವರನ್ನು ಮರೆಯುವುದು ಎಂದರೆ ದುಃಖ, ಹಿಂಸೆ, ಅರಾಜಕತೆಯನ್ನು ಆಹ್ವಾನಿಸಿದಂತೆ ಆಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿ ರೆವರೆಂಡ್ ಡಾ। ಫ್ರಾನ್ಸಿಸ್ ಫರ್ನಾಂಡಿಸ್ 'ಭಾರತವು ವಿವಿಧ ಜಾತಿ/ಧರ್ಮಗಳ ತವರು. ಎಲ್ಲರೂ ಸೇರಿ ಭಾರತಾಂಬೆಯ ತೇರು ಎಳೆಯೋಣ' ಎಂದು ಕರೆ ನೀಡಿದರು.

ಡಾ॥ ಶ್ರೀನಿವಾಸನ್ ಮತ್ತಿತರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಎಸ್.ಬಿ. ಅಶೋಕಕುಮಾರ್ ಸರ್ವೋದಯ ಪ್ರತಿಜ್ಞೆಯನ್ನು ಎಲ್ಲರಿಗೂ ಬೋಧಿಸಿದರು. ಉಪನ್ಯಾಸಕಿ ಜಯಂತಿ ಎಲ್ಲರನ್ನು ಸ್ವಾಗತಿಸಿದರು; ವಿದ್ಯಾರ್ಥಿನಿಯರು ಸರ್ವಧರ್ಮ ಪ್ರಾರ್ಥನೆ ಮಾಡಿದರು. ಪ್ರಾಚಾರ್ಯರಾದ ಶ್ರೀಮತಿ ಪ್ಲಾಸಿ ಎಂ.ಡಿಕಾಸ್ಟ ಅವರು ಅಧ್ಯಕ್ಷತೆ ವಹಿಸಿದ್ದರು.

ಹೊಸಪೇಟೆ(ಬಳ್ಳಾರಿ ಜಿಲ್ಲೆ)ಯಲ್ಲಿ ಸರ್ವೋದಯ ಕಾರ್ಯಕ್ರಮ

ಲೋಕನಾಯಕ ಜಯಪ್ರಕಾಶ ನಾರಾಯಣ ಸರ್ವೋದಯ ಟ್ರಸ್ಟ್ (ರಿ) ವತಿಯಿಂದ 30-01-2018ರಂದು ಜೆ.ಪಿ.ಭವನದಲ್ಲಿ ಸರ್ವೋದಯ ದಿನಾಚರಣೆ (ಹುತಾತ್ಮರ ದಿನಾಚರಣೆ) ಕಾರ್ಯ ಕ್ರಮವನ್ನು ನಡೆಸಲಾಯಿತು.

ಜಿಲ್ಲಾಧಿಕಾರಿ ಡಾ॥ ವಿ. ರಾಮಪ್ರಶಾತ್ ಮನೋಹರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಉಪನ್ಯಾಸಕ ಶ್ರೀ ಎಸ್. ರಾಮಲಿಂಗೇಶ್ವರ (ಶಿಶಿರಾ) ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವಮಾನ್ಯ ರಾಷ್ಟ್ರಪಿತ, ಅಹಿಂಸಾ ಮೂರ್ತಿ ಗಾಂಧೀಜಿಯವರನ್ನು, ಸ್ವಾತಂತ್ರ್ಯ ಹೋರಾಟದ ಪ್ರಥಮ ಸತ್ಯಾಗ್ರಹಿ, ಸತ್ಯ-ಸಂಯಮ-ಸೇವೆಗಳ ಆದರ್ಶ ಮೂರ್ತಿ ವಿನೋಬಾ ಲೋಕನೀತಿಯ ಪ್ರತಿಪಾದಕ, ಸಂಪೂರ್ಣ ಕ್ರಾಂತಿಯ ದ್ರಷ್ಟಾರ, ಲೋಕಬಂಧು, ಲೋಕನಾಯಕ ಜಯಪ್ರಕಾಶ ನಾರಾಯಣರ ತತ್ವ-ಆದರ್ಶಗಳನ್ನು ಸಭೆಯಲ್ಲಿ ವಿವರಿಸಲಾಯಿತು. ■



ಹಿರಿಯ ಚೇತನ, ಸಮಾಜಮುಖಿ ಡಾ॥ ಹೊ. ಶ್ರೀನಿವಾಸಯ್ಯ

ಸಂಸ್ಮರಣ ಗ್ರಂಥ ಮತ್ತು ಚಾರಿಟೆಬಲ್ ಟ್ರಸ್ಟ್ ಉದ್ಘಾಟನೆ

ಹಿರಿಯ ಗಾಂಧೀವಾದಿ, ಗಾಂಧೀ ಸ್ಮಾರಕ ನಿಧಿಗೆ ಮೂರು ದಶಕಗಳಿಗೂ ಹೆಚ್ಚು ಕಾಲ ಅಧ್ಯಕ್ಷರಾಗಿ, ಅದನ್ನು ಉನ್ನತ ಹಂತಕ್ಕೆ ಕೊಂಡೊಯ್ದವರು ಡಾ॥ ಹೊ.ಶ್ರೀನಿವಾಸಯ್ಯ.

2017ರ ಏಪ್ರಿಲ್ 6ರಂದು ನಿಧನರಾದ ಅವರನ್ನು ಇಡೀ ನಾಡು ಸ್ಮರಿಸುತ್ತಿದೆ. ಅವರನ್ನು ಅನೇಕ ಸಭೆ-ಸಮಾರಂಭ ಗಳಲ್ಲಿ ನೆನಪು ಮಾಡಿಕೊಳ್ಳಲಾಗುತ್ತಿದೆ. ಗಾಂಧೀ ಸಾಹಿತ್ಯ ಮತ್ತು ಚಿಂತನೆಯನ್ನು ನಾಡಿನ ಉದ್ದಕ್ಕೂ ಪ್ರಸಾರ ಮಾಡುವಲ್ಲಿ ಅವರು ತಾಳಿದ್ದ ಅಪಾರ ಆಸಕ್ತಿ, ಉತ್ಸಾಹಗಳನ್ನು ಅಸಂಖ್ಯ ಜನರು ನೆನಪಿಸಿಕೊಳ್ಳುತ್ತಿದ್ದಾರೆ.

ಡಾ॥ ಹೊ.ಶ್ರೀನಿವಾಸಯ್ಯ ಅವರು ನಿಧನರಾಗಿ ಒಂದು ವರ್ಷವಾಗುವ ಮೊದಲೇ ಅವರ ಅಭಿಮಾನಿಗಳು, ಅನುಯಾಯಿಗಳು 'ಡಾ॥ ಹೊ.ಶ್ರೀನಿವಾಸಯ್ಯ ಚಾರಿಟೆಬಲ್ ಟ್ರಸ್ಟ್' ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಂಡರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಿತು. ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೂಡ ಜೊತೆಗೂಡಿತು.

ಹೀಗೆ ನಡೆದ ಸಮಾರಂಭವು 4 ಜನವರಿ 2018 ರಂದು ಗಾಂಧೀ ಭವನದಲ್ಲಿ ನಡೆಯಿತು. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರಾದ ಶ್ರೀ ಎಚ್.ಕೆ.ಪಾಟೀಲ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ॥ ಹೊ.ಶ್ರೀನಿವಾಸಯ್ಯ ಸಂಸ್ಮರಣ ಗ್ರಂಥ 'ಗಾಂಧೀಮಾರ್ಗಿ' ಕೃತಿಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಸಂಸದರು ಮತ್ತು ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ, ಹುಬ್ಬಳ್ಳಿ ಇದರ ಅಧ್ಯಕ್ಷರಾದ ನಾಡೋಜ ಡಾ। ಪಾಟೀಲ ಪುಟ್ಟಪ್ಪ ಬಿಡುಗಡೆ ಮಾಡಿದರು. ಡಾ। ಹೊ.ಶ್ರೀನಿವಾಸಯ್ಯ ಕುರಿತ ಕಿರುಸೂಚಿಕೆಯನ್ನು ಮಾಜಿ ಶಾಸಕರು ಮತ್ತು ನೂತನ ಟ್ರಸ್ಟ್‌ನ ಟ್ರಸ್ಟೀ ಆಗಿರುವ ಶ್ರೀ ಡಿ.ಆರ್.ಪಾಟೀಲ್ ಬಿಡುಗಡೆ ಮಾಡಿದರು.

'ಮಹಾತ್ಮಾ ಗಾಂಧೀಜಿ ನನ್ನ ಮೇಲೆ ತುಂಬಾ ಪ್ರಭಾವ ಬೀರಿದ್ದಾರೆ. ಅವರ ಸತ್ಯಪರತೆ ನನ್ನ ಮನಸ್ಸನ್ನು ತುಂಬಾ ಕಾಡಿಸಿದೆ. ನಾನು ಹಿರಿಯರ ಮತ್ತು ಗಾಂಧೀಜಿ ಅವರ ಹಾದಿಯಲ್ಲಿ ನಡೆಯಲು ಪ್ರಯತ್ನಪಟ್ಟು ಎಷ್ಟು ಸಾಧಿಸಿದ್ದೇನೆ ಎಂಬುದು ಅಳತೆಗೆ ನಿಲಕದು. ನನ್ನ ತಂದೆ-ತಾಯಿ ಆಶೀರ್ವಾದ, ಅನೇಕ ಗುರು-ಹಿರಿಯರ ಮಾರ್ಗದರ್ಶನ, ಗಾಂಧೀಜಿ ಮತ್ತು ವಿನೋಬಾಜಿ ಸಾನ್ನಿಧ್ಯ ನನ್ನ ಬದುಕಿಗೆ ಬಹುದೊಡ್ಡ ಪ್ರೇರಣೆ ನೀಡಿದೆ'.

ಡಾ॥ ಹೊ. ಶ್ರೀನಿವಾಸಯ್ಯ

ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ॥ ವೂಡೇ ಪಿ. ಕೃಷ್ಣ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ನೆರೆದಿದ್ದ ವಿದ್ಯಾರ್ಥಿ-ಯುವಜನರನ್ನು ಉದ್ದೇಶಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ॥ ಎಸ್.ಜಿ.ಸಿದ್ಧ ರಾಮಯ್ಯ ಅವರು 'ಯುವಜನತೆಯ ವ್ಯಕ್ತಿತ್ವ ವಿಕಸನಕ್ಕೆ ಗಾಂಧೀ ವಿಚಾರಗಳು' ವಿಷಯ ಕುರಿತು ಉಪನ್ಯಾಸ ನೀಡಿದರು. ಬಿಡುಗಡೆಯಾದ ಕೃತಿ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶದ ರಾಜ್ಯ ಸಂಪರ್ಕಾಧಿಕಾರಿ ಡಾ॥ ಗಣನಾಥಶೆಟ್ಟಿ ಎಕ್ಕಾರು ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ಎನ್.ಆರ್.ವಿಶುಕುಮಾರ್ ಭಾಗವಹಿಸಿದ್ದರು. ನೂತನ ಟ್ರಸ್ಟ್‌ನ ಉಪಾಧ್ಯಕ್ಷರಾದ ಶ್ರೀಮತಿ ಶಶಿಕೃಷ್ಣ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡಿದ್ದರು. ■

ಡಾ॥ ಹೊ.ಶ್ರೀನಿವಾಸಯ್ಯ ಗಾಂಧೀ ಪಡಿಯಚ್ಚಿನ ಮೂರ್ತಿ

ಡಾ॥ ಹೊ.ಶ್ರೀನಿವಾಸಯ್ಯ ಈ ನಾಡು ಕಂಡ ಅಪರೂಪದ ವ್ಯಕ್ತಿ. ನಮ್ಮ ನಾಡಿನಲ್ಲಿ ಹಿರಿಯ ಚಿಂತಕರು ಕೆಲವರಿದ್ದಾರೆ. ಇನ್ನೂ ಕೆಲವರು ಸಮಾಜ ಸೇವಕರೂ, ಗಾಂಧೀವಾದಿಗಳೂ ಇದ್ದಾರೆ. ಅವರಲ್ಲದೆ ಇನ್ನೂ ಕೆಲವರು ಪ್ರಕೃತಿಚಿಕಿತ್ಸಾ ತಜ್ಞರು, ಯೋಗಪಟುಗಳೂ ಇದ್ದಾರೆ. ಆದರೆ, ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ವಿರಳ. ಇಂಥವರಲ್ಲಿ ಡಾ॥ ಹೊ. ಶ್ರೀನಿವಾಸಯ್ಯ ಸೇರಿದ್ದಾರೆ. ಅವರ 93 ವರ್ಷಗಳ ಕಲ್ಲು-ಮುಳ್ಳುಗಳ ಅತ್ಯಂತ ಕಠಿಣ, ದುರ್ಗಮ ಹಾದಿಯನ್ನು ಜೀವನೋತ್ಸಾಹ ಚಿಗುರುವಂತೆ ಒಡಮೂಡಿಸಿಕೊಂಡಿದ್ದು ಬಹುದೊಡ್ಡ ಯಶೋಗಾಥೆಯಾಗಿದೆ.

ನಾಗಮಂಗಲ ತಾಲ್ಲೂಕಿನ ಚೌದರಿಕೊಪ್ಪಲು ಗ್ರಾಮದ ಹೊನ್ನಪ್ಪ ಮತ್ತು ತಿಮ್ಮಮ್ಮ ದಂಪತಿ ಪುತ್ರರಾಗಿ ಜನಿಸಿ, ಬದುಕನ್ನು ಅರಸಿ, ಬೆಂಗಳೂರಿಗೆ ಬಂದು ತಮ್ಮ ಬದುಕನ್ನು ಕಟ್ಟಿ ಕೊಂಡವರು. ಇವರ ತಂದೆ ಸರ್ಕಾರದಲ್ಲಿ ಜಮೇದಾರ್ ಆಗಿದ್ದು, ನಿಸ್ಪೃಹ ಸೇವೆ ಮಾಡಿದವರು. ತಾಯಿ ಸದ್ಗೃಹಿಣಿ. ಇವರ ಪುತ್ರ ಅಪ್ಪಟ ಗ್ರಾಮೀಣ ಪ್ರತಿಭೆ ಡಾ॥ ಹೊ. ಶ್ರೀನಿವಾಸಯ್ಯ. ಅವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ವನ್ನು ಮಲ್ಲೇಶ್ವರಂನಲ್ಲಿ ಪೂರೈಸಿದರು. ನಂತರ, ಮೈಸೂರು ವಿಶ್ವವಿದ್ಯಾಲಯದಲ್ಲಿ ಮೆಕ್ಯಾನಿಕಲ್ ಇಂಜಿನಿಯ ರಿಂಗ್ ಪದವಿ ಪಡೆದರು. ವಿದ್ಯಾರ್ಥಿ ದೆಸೆಯಲ್ಲೇ ಅಂದಿನ ಗಾಂಧೀ ಅನುಯಾಯಿ ಸಿದ್ದವನಹಳ್ಳಿ ಕೃಷ್ಣಶರ್ಮರ ಒಡನಾಟದಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡರು. ರಹಸ್ಯ ಪತ್ರಗಳನ್ನು ಹಂಚಿದರು.

ತಮ್ಮ 9ನೇ ವಯಸ್ಸಿನಲ್ಲಿ ಅಂದರೆ 1934ರಲ್ಲಿ ಗಾಂಧೀಜಿಯವರನ್ನು ಮಲ್ಲೇಶ್ವರಂನಲ್ಲಿ ಬಹುಸನಿಹದಿಂದ ಕಂಡದ್ದನ್ನು ಅವರು ಸದಾ ಕೃತಾರ್ಥ ಭಾವದಿಂದ ಸ್ಮರಿಸುತ್ತಿದ್ದರು. ತಮ್ಮ 12ನೇ ವಯಸ್ಸಿನಲ್ಲಿ ಅವರು ಖಾದಿ ಧರಿಸಲು ಪ್ರಾರಂಭಿಸಿ, ಕೊನೆಯವರೆಗೂ ಖಾದಿ ಬದುಕನ್ನು ಅಪ್ಪಿಕೊಂಡು ಬಾಳಿದರು. ವಿದ್ಯಾರ್ಥಿ ನಾಯಕರಾಗಿ ಹಲವು ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಂಡ ಅವರು 21ನೇ ವಯಸ್ಸಿನಲ್ಲಿ ಮದರಾಸಿನಲ್ಲಿ ಗಾಂಧೀಜಿ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜರ್ಮನಿ ಮೊದಲಾಗಿ ಅನೇಕ ರಾಷ್ಟ್ರಗಳಲ್ಲಿ ಅವರು ಹಲವು ವರ್ಷ ಸೇವೆ ಸಲ್ಲಿಸಿದರೂ, ಖಾದಿ ಉಡುಪನ್ನು ಅವರು ಬಿಟ್ಟವರಲ್ಲ. ಬದಲಾಗಿ, ಬಂಧು-ಮಿತ್ರರೂ ಖಾದಿ ಬಟ್ಟೆ ಧರಿಸುವುದನ್ನು ಪ್ರೇರೇಪಿಸಿದ್ದಾರೆ.

ಜರ್ಮನಿಯಲ್ಲಿ ತಾಂತ್ರಿಕ ಪರಿಣತಿ ಪಡೆದ ಬಳಿಕ ಅವರು ನಮ್ಮ ಬೆಮೆಲ್‌ನಲ್ಲಿ ವ್ಯವಸ್ಥಾಪಕರಾಗಿ, ರೈಲು ಕೋಚ್ ವಿಭಾಗದಲ್ಲಿ ಉನ್ನತ ಹುದ್ದೆ ಹೊಂದಿದರು. ಮಿತ್ರರ ಜೊತೆ ಸೇರಿ, 'ಗಾಂಧೀ ಸಾಹಿತ್ಯ ಸಂಘ'ವನ್ನು ಮಲ್ಲೇಶ್ವರಂನಲ್ಲಿ ಸ್ಥಾಪಿಸಿದರು. ಶ್ರೀನಿವಾಸಯ್ಯ ಅವರದು ಬಹುಕ್ಷೇತ್ರಗಳಲ್ಲಿ ಕೊಡುಗೆ. ಅವರು ಉತ್ತಮ ಸಾಹಿತಿ. ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯಲೋಕಕ್ಕೆ ಅವರು 80ಕ್ಕೂ ಹೆಚ್ಚು ಮೌಲ್ಯಯುತ ಕೃತಿಗಳನ್ನು ನೀಡಿದ್ದಾರೆ. ಬಡವರಿಗಾಗಿ ಸಹಕಾರಿ ತತ್ವದ ಅನ್ವಯ ಶ್ರೀರಾಮ ಸಹಕಾರ ಬ್ಯಾಂಕ್ ಮತ್ತು ಆಂಜನೇಯ ಸಹಕಾರ ಬ್ಯಾಂಕ್ ಸ್ಥಾಪಿಸಿದರು. ಅವರ ಬಹುಮುಖಿ ಸೇವೆಗೆ ಹತ್ತು ಹಲವು ಪುರಸ್ಕಾರಗಳು ಲಭ್ಯವಾದವು. ಪತಂಜಲಿ ಸುವರ್ಣ ಪದಕ, ಗೌರವ ಡಾಕ್ಟರೇಟ್, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಗಾಂಧೀ ಸೇವಾ ಪ್ರಶಸ್ತಿ, ಸಹಕಾರ ರತ್ನ ಇತ್ಯಾದಿಗಳನ್ನು ಉದಾಹರಿಸಬಹುದು.

ಗಾಂಧೀ ಭವನ ರಾಷ್ಟ್ರೀಯ ಮನ್ನಣೆ ಗಳಿಸಿರು ವುದರ ಹಿಂದೆ ಮತ್ತು ರಾಜ್ಯದಲ್ಲಿ 'ಜಿಲ್ಲೆಗೊಂದು ಗಾಂಧೀ ಭವನ' ಎಂಬ ಯೋಜನೆಯನ್ನು ಕರ್ನಾಟಕ ಸರ್ಕಾರ ಕೈಗೆತ್ತಿಕೊಂಡಿರುವುದರ ಹಿಂದೆ ಡಾ॥ ಹೊ.ಶ್ರೀನಿವಾಸಯ್ಯ ಅವರ ಶ್ರಮ ಅಪಾರವಾಗಿದೆ.

ನಾಡೋಜ ಡಾ॥ ಪಾಟೀಲ ಪುಟ್ಟಪ್ಪ



SRINIVASAIAH: A VETERAN LEADER

His activity was not something casual. It was like a perpetual flow with no interval. He worshipped God in man. He is pleased when his friend who was under trouble is freed and is also pleased. Where do we get such men of gold.

Mahatma Gandhi was not a mere politican or a freedom fighter. He lived and worked on a higher plane where humanity was working for a synthesis of science and spirituality. People from all walks of life followed him, charmed by his magic personality.

The central aim of his life was a pursuit of truth which is enshrined as the core of all religions. Brotherhood of man and the unity of creation have to be realized in man's effort to unravel the mystery behind Truth. The pathof service with devotiontakes us along this pathof realization. The stability of any society is sustained by him who qualifies himself in the essential and diverse methods through which he can serve his neighbour. This is the essence of all religions and the quimntessence of what we call Gandhism.

Gandhi says that there is no such thing as Gandhism. The path of disinterested service is the core of all verities of Gandhian activity.

We haveonly a very few people who have dared to follow this path of Gandhian service in our society. Fortunately when we look up to the multifaceted life of Sri. Ho. Srinivasaiah, who was the President of Karnataka Gandhi Smaraka Nidhi that we will be able to have a sigh of relief and say that here we have one noble person who comes very near to this ideal.

When the workers and leaders of the Gandhi Smarak Nidhi in Delhi, everyone is charmed by the presence of this friend from Karnataka. The impritnt of Gandhi's service flowed through many channels curing man's body, mind and soul. Our Karnataka friend was associated with innumerable activities through which he brought the touch of insterested service of the men in need.

But what was special about our Karnataka leader was that he was adorned with the spirit of dis-interestedness. That was the central message of Karmayoga of Gita and Gandhi. To expect nothing in return, not even a word of thanks, is the hall mark of the peronality of Sri. Srinivasaih.

His activity was not something casual. It was like a perpetual flow with no interval. He worshipped God in man. He is pleased when his friend who was under trouble is freed and is also pleased. Where do we get such men of gold. The Govt. of Karnataka showered him with awards and society also followed suit. The people of Karnataka were jubilant witnesses to these acts of recognition.

I personally am a witness to the way in which he was honoured by his comrades and friends of Karnataka.

Let us not say that we have lost a brilliant leader of Karnataka. He lived a full life of dedication to the people. What Gita directs us is that at the end whatever you have gathered should be surrendered at the feet of the Almighty.

Sri. Srinivasaiah is a man of total dedication calling us to join him in the sublime way in our lives also

Let us do his bidding. I am glad, that he has left behind many friends who are following him in this path of service and dedication.

P. Gopinathan Nair
Former Chairperson
All India Gandhi Smarak Nidhi
Gandhi Bhavan, Trivendrum-14

ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ

ಮದ್ಯನಿಷೇಧ: ಸರ್ಕಾರ ಧೃಡ ನಿರ್ಧಾರ ಕೈಗೊಳ್ಳಬೇಕು

'ಲೋಕಾ: ಸಮಸಾ: ಸುಖಿನೋಭವಂತು' ಎಂಬುದು ಭಾರತದ ಪ್ರಾಚೀನ ಆಶಯ. ಭಾರತೀಯ ಸಂಪ್ರದಾಯ ಸಮಾಜದಲ್ಲಿ ಪಂಥ-ಪಂಗಡ-ಜಾತಿಗಳ ಪ್ರಭಾವ ಹೆಚ್ಚಾಗಿ ಬೆಳೆದು ಬಂತೇ ಹೊರತು, ಎಲ್ಲವೂ ಬೆಳೆಯಲಿಲ್ಲ; ಎಲ್ಲರೂ ಬೆಳೆಯಲಿಲ್ಲ. ಹಾಗಾಗಿ, ಪ್ರಾಚೀನ ಆಶಯವು ಸಮಾಜದಲ್ಲಿ ಮೂಲೆಗುಂಪಾಗಿ ಉಳಿಯಿತು.

ಇನ್ನು ವಿವಿಧ ಸಿದ್ಧಾಂತಗಳ ಮುಖವಾಡ ಧರಿಸಿ, ಶಕ್ತಿ-ಯುಕ್ತಿಗಳ ಮೂಲಕ ಅಧಿಕಾರಕ್ಕೆ ಬಂದ ಸರ್ಕಾರ ಗಳು ಎಲ್ಲರ ಸಮಷ್ಟಿಯ ಹಿತ ಹಾಗೂ ಏಳಿಗೆ ಸಾಧಿಸುವುದರಲ್ಲಿ ಆಂಶಿಕ ಯಶಸ್ಸು ಕಂಡವು; ಪೂರ್ಣ ಯಶಸ್ಸನ್ನು ಕಾಣಲಿಲ್ಲ. ಆದ್ದರಿಂದಲೇ ಅಸಮಾನತೆ, ಆಂತರಿಕ ಅಸಮಾಧಾನ, ಹಿಂಸೆ, ದೌರ್ಜನ್ಯ, ಉಗ್ರವಾದ ಭಯೋತ್ಪಾದನೆ, ಭ್ರಷ್ಟಾಚಾರ, ಶೋಷಣೆ ಹೆಚ್ಚಿವೆ.


ಆಧುನಿಕತೆ ಮತ್ತು ನವ ನಾಗರಿಕತೆ ಕಡೆಗೆ ಮುಖ ಮಾಡಿರುವ ಜನರು ಪರಸ್ಪರರನ್ನು ಅರಿಯುವ, ಪರಸ್ಪರರಲ್ಲಿ ಅನ್ಯೋನ್ಯತೆಯನ್ನು ಕಾಣುವ, ಎಲ್ಲರಿಂದ ತಾನು ಎಲ್ಲರಿಗಾಗಿ ತಾನು, ಬಾಳೋಣ-ಬಾಳಲು ಅವಕಾಶ ನೀಡೋಣ ಇತ್ಯಾದಿ ತತ್ವಗಳನ್ನು ಕಡೆಗಣಿಸಿದ್ದು ಕಂಡು ಬರುತ್ತಿದೆ.

ಇಂಥ ಸಂದರ್ಭದಲ್ಲಿ ಜಿನಾಚಾರ್ಯ ಸುಮಂತ ಭದ್ರರ 'ಸರ್ವೋಧಯವೇ ಪವಿತ್ರವಾದುದು' ಎಂಬ ಮಾತು ಮತ್ತು ಖ್ಯಾತ ಚಿಂತಕ ಜಾನ್ ರಸ್ಕಿನ್‌ರ 'ಕಟ್ಟ ಕಡೆಯವರತ್ತ' (ಅನ್ ಟು ದಿಸ್ ಲಾಸ್ಟ್) ನಮಗೆ ಮುಖ್ಯವಾಗಬೇಕಿದೆ.

ಮಹಾತ್ಮಾ ಗಾಂಧೀಜಿಯವರು ಇದೇ ದಾರಿಯನ್ನು ಅನುಸರಿಸಿದರು. ಅವರು ಸರ್ವೋದಯದ ಮಾರ್ಗದಲ್ಲಿ ತಾವೂ ನಡೆದು, ನಮಗೆ ಅದನ್ನು ತೋರಿಸಿದರು. ಸರ್ವೋದಯ ಈಗಲೂ ಎಲ್ಲರಿಗೆ ಯುಗಮಂತ್ರವಾಗಬೇಕಿದೆ; ಸರ್ವರಲ್ಲಿ ಈ ಬಗ್ಗೆ ಜಾಗೃತಿ ಮೂಡಿ, ಸರ್ವರ ಏಳಿಗೆ ಸಾಧ್ಯವಾಗಬೇಕಿದೆ.

ಕರ್ನಾಟಕದಲ್ಲಿ ಸರ್ವೋದಯ ತತ್ವವನ್ನು ಪ್ರಸಾರ ಮಾಡುವುದಕ್ಕೆ ತನ್ನನ್ನು ಅರ್ಪಿಸಿಕೊಂಡಿರುವ 'ಕರ್ನಾಟಕ ಸರ್ವೋದಯ ಮಂಡಲ'ವು ಜನವರಿ 30-31ರಂದು ತುಮಕೂರಿನಲ್ಲಿ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನವನ್ನು ನಡೆಸಿತು. ಈ ವರ್ಷ ಅದು 'ಮದ್ಯಪಾನ ನಿಷೇಧ'ವನ್ನು ಪ್ರಧಾನ ವಿಷಯವಾಗಿ ಪರಿಗಣಿಸಿತ್ತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ॥



ಎಚ್.ಎಸ್.ಗೊರೆಸ್ವಾಮಿ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರು 'ಸರ್ವೋದಯ ಚಳವಳಿಯು ದಾನವರನ್ನು ಮಾನವರನ್ನಾಗಿ ಮಾಡುತ್ತದೆ; ಅದು ಎಲ್ಲರ ಜೀವನವನ್ನು ಪರಿವರ್ತಿಸಬಲ್ಲದು. ಸಮಾಜಕ್ಕೋಸ್ಕರ ಬದುಕಬೇಕು ಎಂಬ ಮನೋಭಾವ ಸರ್ವೋದಯ ಪರಿಕಲ್ಪನೆ ಹಿಂದಿದೆ' ಎಂದು ತಿಳಿಸಿದರು. 'ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳು ಮದ್ಯನಿಷೇಧ ಮಾಡುವ ಧೈರ್ಯ ತೋರಿಲ್ಲ. ಟಿಪ್ಪು ಸುಲ್ತಾನ್ ಆಡಳಿತದಲ್ಲಿ ಮಾತ್ರ ಮದ್ಯ ನಿಷೇಧವಾಗಿತ್ತು' ಎಂದು ತಿಳಿಸಿದರು.

ಸಮಾರೋಪ ಭಾಷಣ ಮಾಡಿದ ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ॥ ವೂಡೇ ಪಿ. ಕೃಷ್ಣ ಮಾತನಾಡಿ, 'ಗಾಂಧೀಜಿಯವರು ಜನರನ್ನು ರಚನಾತ್ಮಕ ಚಟುವಟಿಕೆಗಳ ಕಡೆಗೆ ಸೆಳೆದರು' ಎಂದು ತಿಳಿಸಿದರು.

ಸರ್ವೋದಯ ಮಂಡಲದ ಅಧ್ಯಕ್ಷರಾದ ಎಲ್. ನರಸಿಂಹಯ್ಯ, ರಾಜ್ಯ ಕಾರ್ಯದರ್ಶಿ ಡಾ॥ ಎಚ್.ಎಸ್. ಸುರೇಶ್, ಜಿಲ್ಲಾಧ್ಯಕ್ಷ ಎಂ. ಬಸವಯ್ಯ, ಜಿಲ್ಲಾ ಕಾರ್ಯದರ್ಶಿ ಆರ್.ವಿ. ಪುಟ್ಟಕಾಮಣ್ಣ, ಪತ್ರಿಕೋದ್ಯಮಿ ಎಸ್. ನಾಗಣ್ಣ ಮುಂತಾದವರು ಭಾಗಿಯಾಗಿದ್ದರು.

■



ಮತದಾರರು ಹಾಗೂ ರಾಜಕೀಯ ಪಕ್ಷಗಳಿಗೆ ಸಾರ್ವಜನಿಕ ಮನವಿ

ರಾಜಕೀಯ ಪಕ್ಷಗಳು ಸದನದಲ್ಲಿ ಇರಲೇ ಬೇಕಾದ ಪ್ರಾಮಾಣಿಕ, ನಿಸ್ವಾರ್ಥಿ, ದಾರ್ಶನಿಕ, ಸಮಾನತೆ-ಸಹೋದರತೆಯ ತತ್ವಬದ್ಧ ಜನಸೇವಕರನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಬೇಕಾಗಿ ವಿನಂತಿ. ಭಾರತದ ಪ್ರಜಾಪ್ರಭುತ್ವ ವನ್ನು ಚಿರಸ್ಥಾಯಿಗೊಳಿಸಬೇಕಾದ ಎಲ್ಲಾ ಮತದಾರ ಬಂಧುಗಳು ಕಾಳಜಿಯಿಂದ ಮತಗಟ್ಟೆಗೆ ಬಂದು, ಪ್ರಜಾಪ್ರಭುತ್ವ ಸಂರಕ್ಷಕ ವ್ಯಕ್ತಿಯನ್ನು ಚುನಾಯಿಸಬೇಕಾಗಿ ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇವೆ.

ನಾವಿಂದು ಕರ್ನಾಟಕ ವಿಧಾನ ಸಭಾ ಚುನಾವಣೆ 2018ರ ಬಹುದೊಡ್ಡ ಪ್ರಜಾಪ್ರಭುತ್ವದ ವೇದಿಕೆಯಲ್ಲಿ ನಿಂತಿದ್ದೇವೆ. ಚುನಾವಣೆಯ ಕಾವು ಮತ್ತು ಹವಾ ಅತಿ ವೇಗವಾಗಿ ಏರುತ್ತಿದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳು ಸಕಲ ರೀತಿಯಲ್ಲಿ ಸಜ್ಜುಗೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಬಹುಮತ ಗಳಿಸಿ, ಅಧಿಕಾರ ಹಿಡಿಯಲು ಸರ್ವರೀತಿಯಲ್ಲಿ ಪ್ರಯತ್ನ ಮಾಡುತ್ತಿವೆ. ಇಂಥ ಸಂದರ್ಭದಲ್ಲಿ ಮತದಾರ ಮುಂದಿನ 5 ವರ್ಷಗಳಲ್ಲಿ ಈ ರಾಜ್ಯದಲ್ಲಿ ಯಾರು ಜನಸೇವಕರಾಗಿ ಕೆಲಸ ಮಾಡುವರು? ಸಂವಿಧಾನಾತ್ಮಕ ಹಕ್ಕು-ಅಧಿಕಾರ-ಅವಕಾಶಗಳನ್ನು ಎಲ್ಲಾ ವರ್ಗಗಳಿಗೆ ತಲುಪಿಸುವವರು ಯಾರು? ಜನಪ್ರತಿನಿಧಿಗಳು, ಜನರ ಆಶೋತ್ತರಗಳಿಂದ ದೂರ ಸರಿದಿರುವುದೇಕೆ? ಚುನಾವಣೆ ಯಲ್ಲಿ ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಚುನಾವಣೆಯ ನಂತರ ಜನರ ನಂಬಿಕೆ-ವಿಶ್ವಾಸಗಳನ್ನು ಕಳೆದುಕೊಳ್ಳಲು ಕಾರಣ ಗಳೇನು?

ಇಡೀ ವಿಶ್ವದಲ್ಲಿಯೇ, ಭಾರತ ಅತ್ಯಂತ ಹಿರಿದಾದ ಪ್ರಜಾಪ್ರಭುತ್ವ ದೇಶವಾಗಿದೆ. ಭಾರತದ ಸಂವಿಧಾನ ಜಗತ್ತಿನ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದೆ. ಇಂತಹ ಘನತೆಯನ್ನು ಪಡೆದ ಭಾರತದ ಗಣರಾಜ್ಯದಲ್ಲಿನ ಒಂದು ರಾಜ್ಯವಾದ 'ಕರ್ನಾಟಕ' ಹಿಂದಿನ 70 ವರ್ಷಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಪ್ರಬುದ್ಧ ಮತದಾರರು, ಅತ್ಯಂತ ನಿರ್ಣಾಯಕವಾಗಿ ಮತ ಚಲಾವಣೆ ಮಾಡಿ, ಪ್ರಜೆಗಳ ಸೇವಕ, ಪ್ರತಿನಿಧಿಯಾಗುವಂತಹ ಬಹಳಷ್ಟು ಅಭ್ಯರ್ಥಿಗಳನ್ನು ಗೆಲ್ಲಿಸಿರುವ ನಿದರ್ಶನಗಳಿವೆ. ಆದಾಗ್ಯೂ, ಭಾರತದಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದಂಥ

ಚುನಾವಣೆ ಸುನಾಮಿಗಳು, ಸುಂಟರಗಾಳಿ ಗಳಲ್ಲಿ ಬಂದಂಥ ಧಾರ್ಮಿಕ ದುರಭಿಮಾನ, ಕೋಮುವಾದ, ಜನಾಂಗ ಶ್ರೇಷ್ಠತೆ, ಹೀರೋ ಆರಾಧನೆ, ಭ್ರಷ್ಟಾಚಾರ, ಅಧಿಕಾರಿಗಳ ನಿರಂಕುಶ ಹಿಡಿತ, ಲಿಂಗ ತಾರತಮ್ಯ, ದಲಿತರು ಮತ್ತು ಹಿಂದುಳಿದವರ ಅವಗಣನೆ, ಜನಸಾಮಾನ್ಯರನ್ನು ತತ್ತರಗೊಳಿಸಿವೆ. ಪ್ರಜೆಗಳ ಆರ್ಥಿಕ ಒತ್ತಡ ಮತ್ತು ಬೇಡಿಕೆಗಳು ರಾಜಕೀಯ ಪ್ರತಿನಿಧಿಗಳಿಗೆ ಮತ್ತು ಸರ್ಕಾರ ಗಳಿಗೆ ಸವಾಲಾಗಿ ಕಾಣುತ್ತಿವೆ. ನಾವು ಆರಿಸಿದ ಚುನಾಯಿತ ಪ್ರತಿನಿಧಿಗಳು, ವಿಧಾನ ಸಭೆಯಲ್ಲಿ, ಸಂಸತ್ತಿನಲ್ಲಿ ಹೇಗೆ ನಡೆದುಕೊಂಡಿದ್ದಾರೆ? ಹೇಗೆ ನಡೆದುಕೊಳ್ಳ ಬೇಕಿತ್ತು? ಅವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಆಯ್ಕೆ ಮಾಡಿದಂಥ ರಾಜಕೀಯ ಪಕ್ಷಗಳು ಇದಕ್ಕೆಷ್ಟು ಹೊಣೆ? ರಾಜಕೀಯ ಪಕ್ಷಗಳಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ, ಸೇವಾ ಮನೋಭಾವ, ಸಂವಿಧಾನಿಕ ಪ್ರಜ್ಞೆ ಮತ್ತು ಅರ್ಪಣಾ ಮನೋಭಾವದ ಸದಸ್ಯರು, ಪ್ರತಿನಿಧಿಗಳು ಇಲ್ಲವೆ? ಅಂಥವರನ್ನು ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಏಕೆ ನಿಲ್ಲಿಸುತ್ತಿಲ್ಲ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ದರ್ಪ, ಠೇಂಕಾರ, ಅಧಿಕಾರದ ಆರ್ಭಟ, ದೌಲತ್ತಿನ ಪ್ರದರ್ಶನ ಮಾಡದ, ಸರಳ, ನಿರಾಡಂಬರ, ವಿನಮ್ರತೆಯ ಜನನಾಯಕರು ರಾಜಕೀಯ ಪಕ್ಷಗಳಲ್ಲಿ ಇಲ್ಲವೆ?

ರಾಷ್ಟ್ರದ ಆರ್ಥಿಕ ಪ್ರಗತಿಯ ಫಲಗಳು ಎಲ್ಲಾ ಜನರಿಗೆ ತಲುಪುತ್ತಿಲ್ಲ ಎಂಬ ಜನರ ಕೂಗು ಕೇಳಿಸಿಕೊಳ್ಳುವ ಜನಪ್ರತಿನಿಧಿಗಳು ಮತ್ತು ಸರ್ಕಾರ ರಚನೆಯಾಗಬೇಕಿದೆ. ಇದಕ್ಕಾಗಿ ರಾಜಕೀಯ ಇಚ್ಛಾಶಕ್ತಿಯನ್ನು ಶಾಸಕರು ಮತ್ತು ಶಾಸಕಾಂಗ ಹೊಂದಬೇಕಾಗುತ್ತದೆ. ಇಂಥ ಇಚ್ಛಾಶಕ್ತಿಯನ್ನು ಹೊಂದಿರುವಂಥ ಜನನಾಯಕರನ್ನು ಮಾತ್ರ ಚುನಾವಣೆಗಳ ಮೂಲಕ ಜನರು ಆರಿಸಿ ಕಳುಹಿಸ ಬೇಕಾಗಿದೆ.

ಭಾರತದ ಪಿತಾಮಹ ಮಹಾತ್ಮ ಗಾಂಧೀಜಿ ಯವರ ಮಹತ್ವದ ಆಶಯ 'ಜನತೆಯ ಹಿತಕ್ಕಾಗಿ ಪಣತೊಟ್ಟ ವಿಶಾಲ ಮನಸ್ಸಿನ ಮತ್ತು ಪ್ರಾಮಾಣಿಕರಾದ ಪ್ರತಿನಿಧಿಗಳು ಮಾತ್ರ ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡಬಲ್ಲರು. ಜನರಿಗೆ ಸ್ವಾತಂತ್ರ್ಯ, ಆತ್ಮಗೌರವ, ಒಗ್ಗಟ್ಟಿನ ತೀವ್ರಾಪೇಕ್ಷೆ ಇರಬೇಕು. ಅವರು ಒಳ್ಳೆಯವರನ್ನು, ಸತ್ಯಸಂಧರನ್ನು ಮಾತ್ರವೇ ತಮ್ಮ ಪ್ರತಿನಿಧಿಗಳಾಗಿ ಆರಿಸುವ ಪಣತೊಡಬೇಕು' ಎಂಬ ಮಾತು ಪ್ರಜಾಪ್ರಭುತ್ವದ ತಾಯಿಬೇರು.

ಡಾ॥ ಬಿ.ಆರ್. ಅಂಬೇಡ್ಕರ್ ಅವರು "ಈ ಸದನದ ಸದಸ್ಯರಾಗಲು ಕೇವಲ ಶಿಕ್ಷಣ ಏಕೈಕ ಅರ್ಹತೆಯಾಗುವುದು ಖಂಡಿತ ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ನಾವು ಭಗವಾನ್ ಬುದ್ಧರು ಬಳಸಿರುವ ಪದಗಳನ್ನು ಉಲ್ಲೇಖಿಸುವುದಾದರೆ, 'ಮನುಷ್ಯರು ಎರಡು ಅಂಶಗಳನ್ನು ಹೊಂದಿರಬೇಕು; ಒಂದನೆ ಯದು ಜ್ಞಾನ ಮತ್ತೊಂದು ಶೀಲ. ಶೀಲವಿಲ್ಲದ ಜ್ಞಾನ ಅಪಾಯ ಕಾರಿ. ಈ ದೆಸೆಯಲ್ಲಿ ಶೀಲ ಅಂದರೆ ನಡತೆ, ನೈತಿಕ ಸ್ಥೈರ್ಯ. ಯಾವುದೇ ಪ್ರಲೋಭನೆಗೆ ಒಳಗಾಗದೆ, ಸ್ವತಂತ್ರ ವಾಗಿರುವ ಸಾಮರ್ಥ್ಯ ಎಂದರ್ಥ. ಈ ನಿಟ್ಟಿನಲ್ಲಿ ಒಂದು ನಿರ್ದಿಷ್ಟ ಮಟ್ಟದ ಶೀಲ ಗಳಿಸದ ಯಾವುದೇ ಸದಸ್ಯರು ಈ ಪವಿತ್ರ ಸದನವನ್ನು ಪ್ರವೇಶಿಸುವುದನ್ನು ನಾನು ನೋಡಲು ಇಷ್ಟ ಪಡುವುದಿಲ್ಲ. ಜನರು ತಮ್ಮ ಕಲ್ಯಾಣದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಸದಸ್ಯರನ್ನಷ್ಟೆ ಆಯ್ಕೆ ಮಾಡುತ್ತಾರೆ" ಎಂದು ಸಚ್ಚಾರಿತ್ರ್ಯದ, ಪ್ರಾಮಾಣಿಕ ವ್ಯಕ್ತಿಗಳನ್ನು ಚುನಾವಣೆಯಲ್ಲಿ ಆಯ್ಕೆ ಮಾಡಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ, ಕರ್ನಾಟಕದ ಪ್ರಜ್ಞಾವಂತ ಮತ ದಾರರು ಮಹಾತ್ಮ ಗಾಂಧೀಜಿಯವರು ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ನುಡಿಗಳನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ನಿಷ್ಕಲಂಕ, ಪ್ರಾಮಾಣಿಕ, ಸತ್ಯ-ನ್ಯಾಯಭೀರು, ಪಾರದರ್ಶಕ ವ್ಯಕ್ತಿಗಳನ್ನು ವಿಧಾನ ಸಭೆಗೆ ಆಯ್ಕೆ ಮಾಡಿ ಕಳುಹಿಸಬೇಕಾಗಿ ಮನವಿ ಮಾಡುತ್ತೇವೆ.

ಅಂತೆಯೆ, ರಾಜಕೀಯ ಪಕ್ಷಗಳು ಸದನದಲ್ಲಿ ಇರಲೇ ಬೇಕಾದ ಪ್ರಾಮಾಣಿಕ, ನಿಸ್ವಾರ್ಥಿ, ದಾರ್ಶನಿಕ, ಸಮಾನತೆ-ಸಹೋದರತೆಯ ತತ್ವಬದ್ಧ ಜನಸೇವಕರನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಬೇಕಾಗಿ ವಿನಂತಿ. ಭಾರತದ ಪ್ರಜಾಪ್ರಭುತ್ವ ವನ್ನು ಚಿರಸ್ಥಾಯಿಗೊಳಿಸಬೇಕಾದ ಎಲ್ಲಾ ಮತದಾರ ಬಂಧುಗಳು ಕಾಳಜಿಯಿಂದ ಮತಗಟ್ಟೆಗೆ ಬಂದು, ಪ್ರಜಾಪ್ರಭುತ್ವ ಸಂರಕ್ಷಕ ವ್ಯಕ್ತಿಯನ್ನು ಚುನಾಯಿಸ ಬೇಕಾಗಿ ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇವೆ.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧಿ–ಅಂಬೇಡ್ಕರ್
ಸತ್ತಿದ್ದಾರೆಂದುಕೊಂಡವರು ಎದುರುಬದುರು ಆದಾಗ





ದೇವನೂರ ಮಹಾದೇವ

'ಗ್ರಾಮ ಸ್ವರಾಜ್: ಗಾಂಧಿ ಅಂಬೇಡ್ಕರ್ ಒಂದು ಅನುಸಂಧಾನ' ವಿಷಯ ಕುರಿತು ಚರ್ಚೆಗೆ ನೀವೂ ಬನ್ನಿ" ಎಂಬ ಕರೆ ಬಂದಾಗ "ಏನು ಜಗಳವನ್ನು ಸರಸ ಮಾಡಬೇಕು ಅಂತಿದ್ದೀರಾ ಹೇಗೆ?" ಎಂದು ತಮಾಷೆ ಮಾಡಿದೆ. ಆ ಇಬ್ಬರ ನಡುವೆ ಜಗಳ ಇಂದೂ ನಡೆಯುತ್ತಿದೆ; ಅದು ತೀವ್ರವಾಗೂ ಇದೆ. ಇದರ ಅರ್ಥ –ಆ ಇಬ್ಬರೂ ಇನ್ನೂ ಸತ್ತಿಲ್ಲ ಅಂತಲೇ ಅರ್ಥ. ಇಂದೂ ಅವರು ಹೆಚ್ಚು ಜೀವಂತವಾಗಿದ್ದಾರೆ ಅಂತಲೂ ಅರ್ಥ.

ಇದನ್ನು ನಾನು ಒಂದು ಶುಭ ಸೂಚನೆಯಾಗಿ ನೋಡುತ್ತೇನೆ. ಜಾಗತೀಕರಣದ ಅಟ್ಟಹಾಸದಲ್ಲಿ ವ್ಯಾಪಾರ ಕುಣಿದು ಕುಪ್ಪಳಿಸುತ್ತಾ ಈ ವ್ಯಾಪಾರವೇ ಆಳ್ವಿಕೆಯಾಗಿ ಎಲ್ಲಾ ಸೈದ್ಧಾಂತಿಕ ಆಲೋಚನೆಗಳೂ, ಹೋರಾಟಗಳು ಕಣ್ಮರೆಯಾಗುತ್ತಿವೆ ಎಂದು ಎಲ್ಲರೂ ನಂಬುತ್ತಿರುವ ಈ ದು:ಸ್ಥಿತಿಯಲ್ಲಿ ಈ ಇಬ್ಬರ ಜೀವಂತಿಕೆಯು ಮುಳುಗುವವರಿಗೆ ಒಂದು ಹುಲ್ಲುಕಡ್ಡಿ ಸಿಕ್ಕಂತೆ ನನಗೆ ಕಾಣಿಸುತ್ತದೆ.

ಇವರ ಜಗಳಕ್ಕೆ ಹೋಗುವ ಮುನ್ನ ಈ ಜಗಳ ಆಡುವವರ ನಡುವೆ ಆಗಾಗ ಮಿಂಚಿನಂತೆ ಕಾಣುವ ಪರಸ್ಪರ ಗೌರವ, ನಂಬಿಕೆ, ಮೆಚ್ಚಿಗೆಗಳ ಒಂದೆರಡು ಉದಾಹರಣೆಗಳನ್ನು ಕೊಡುವೆ. ನಂತರ ಜಗಳಕ್ಕೆ ಖಂಡಿತ ಹೋಗುವಾ.

ಭಗವಾನ್‌ದಾಸ್ ಅವರು ಸಂಪಾದಿಸಿರುವ 'ದಸ್ ಸ್ಪೋಕ್ ಅಂಬೇಡ್ಕರ್' ಮೊದಲ ಸಂಪುಟದಲ್ಲಿನ ಉಲ್ಲೇಖದಂತೆ, ಅಂಬೇಡ್ಕರ್ ಅವರು ಗಾಂಧಿಯವರ ಬಗ್ಗೆ ಪೂನಾ ಒಪ್ಪಂದದ ನಂತರ ಕೊಟ್ಟ ಹೇಳಿಕೆಯಲ್ಲಿ 'ನನ್ನ ಮತ್ತು ಆತನ (ಗಾಂಧಿ) ಮಧ್ಯೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಆತನನ್ನು ಭೇಟಿ ಮಾಡಿದಾಗ ತಿಳಿದು, ನನಗೆ ಆಶ್ಚರ್ಯವಾಗಿದೆ, ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ. ಇದನ್ನು ಯಾವ ರೀತಿಯಲ್ಲಿ ಅರ್ಥ ಮಾಡಿಕೊಳ್ಳೋಣ?

ಹಾಗೆಯೆ, ಗಾಂಧೀ 1946ರಲ್ಲಿ ಗೋರಾ ಅವರ ಅಳಿಯನಿಗೆ 'ನೀನು ಅಂಬೇಡ್ಕರ್‌ರಂತೆ ಆಗಬೇಕು. ನೀನು ಅಸ್ಪೃಶ್ಯತೆಯು ಹಾಗೂ ಜಾತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆ ತೆತ್ತಾದರೂ ಸರಿಯೇ ಅಸ್ಪೃಶ್ಯತೆಯು ಹೋಗಲೇಬೇಕು' ಎಂದು ಹೇಳುತ್ತಾರೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋಣ?

'ಸಂಸ್ಕೃತಿ ಕಥನ' ಎಂಬ ತಮ್ಮ ಕೃತಿಯಲ್ಲಿ ಡಿ.ಆರ್. ನಾಗರಾಜ್ ದಾಖಲಿಸಿರುವಂತೆ, ಎಲ್ಲರೂ ಗಾಂಧಿಗೆ ಮಹಾತ್ಮ ಎನ್ನುತ್ತಿದ್ದಾಗ, ಆ ಮಹಾತ್ಮನೇ ಅಂಬೇಡ್ಕರರನ್ನು ಮಹಾತ್ಮ ಎನ್ನುತ್ತಾರೆ. ಇದೇನು? ಇದೆಲ್ಲವೂ ಈ ಅವರ

ಜಗಳವೂ ಆ ಮಹಾತ್ಮರಿಬ್ಬರ ಕೊಡುಕೊಳ್ಳುವಿಕೆಯೇ?

ಹೀಗಿದ್ದೂ ಯಾಕೆ ವಿರಸ ಎಂದು ನೋಡಿದರೆ– ಗಾಂಧಿ ಹುಟ್ಟುತ್ತಾ ಸನಾತನಿ. ಕರ್ಮಠ. ನಡೆಯುತ್ತಾ, ಎಡವುತ್ತಾ, ಬೆಳೆಯುತ್ತಾ ಪ್ರಗತಿಪರ. ಭಾರತವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿರುವ ಆ ಸನಾತನಿಗಳೂ, ಕರ್ಮಠರೂ ತನ್ನೊಡನೆ ಹೆಜ್ಜೆ ಇಡುತ್ತಿರುವರೆ ಇಲ್ಲವೆ ಎಂಬುದನ್ನು ಸದಾ ಕಡೆಗಣ್ಣಿನಿಂದಲೇ ಗಮನಿಸುತ್ತಾ, ಅವರನ್ನೂ ಜೊತೆ ಜೊತೆಗೇ ಎಳೆದುಕೊಂಡು ಹೆಜ್ಜೆ ಇಡುವಾತ ಗಾಂಧಿ. ಹಾಗೆಯೆ, ಇತಿಹಾಸಕಾರ ಎಸ್. ಚಂದ್ರಶೇಖರ್ 'ಗಾಂಧೀಜಿ ಕಾರ್ಯ ರಾಜಕೀಯದಿಂದ ಸಾಮಾಜಿಕದತ್ತ ಇಳಿದು ಬಂದರೆ, ಅಂಬೇಡ್ಕರ್ ಅವರು ಸಾಮಾಜಿಕ ಕಾರ್ಯದಿಂದ ರಾಜಕೀಯ ಕಣಕ್ಕೆ ಏರಿದವರು' ಎಂದು ಹೇಳುತ್ತಾರೆ.

ಈ ಬಗೆಯ ಚಲನೆ ಕಾರಣವಾಗಿ ಗಾಂಧಿ–ಅಂಬೇಡ್ಕರ್ ನಡುವೆ ಘರ್ಷಣೆ ಉಲ್ಬಣಗೊಂಡಿತೆ? ಜೊತೆಗೆ ಇಬ್ಬರೂ ಸಮಕಾಲೀನರು. ಆಯಾ ದಿನಕ್ಕೆ ಪ್ರತಿಕ್ರಿಯಿಸಲೇ ಬೇಕಿತ್ತು. ಇದರೊಡನೆ ದುಂಡು ಮೇಜಿನ ಪರಿಷತ್‌ನಲ್ಲಿ ಗಾಂಧಿ ಕ್ಷುದ್ರವಾಗಿ ನಡೆದುಕೊಂಡು, ಅಂಬೇಡ್ಕರ್‌ಗೆ ಗಾಯ ಮಾಡಿ ಬಿಟ್ಟರು. ಈ ಎಲ್ಲಾ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರ ಪ್ರತಿಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಬೇಕೇ ಹೊರತು ಅಂದರೆ ಆಯಾ ಕಾಲದ ಪ್ರತಿಕ್ರಿಯೆಗಳನ್ನು ಆಯಾ ಕಾಲದ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅವರನ್ನು ಒಟ್ಟಾಗಿ ಅರ್ಥ ಮಾಡಿಕೊಳ್ಳಬೇಕೇ ಹೊರತು ಅವರ ಸಾಂದರ್ಭಿಕ ಅಭಿಪ್ರಾಯಗಳನ್ನು ಕಟ್ಟು ಗಾಜು ಹಾಕಿಸಿ ಸ್ಥಿರಗೊಳಿಸಿ, ನೇಣಿಗೆ ಏರಿಸಬಾರದು.


ಅವರ ಜಗಳ–ಜಟಾಪಟಿಗೆ ಕಾರಣ, ಗಾಂಧಿ ಮತ್ತು ಅಂಬೇಡ್ಕರರ ಗ್ರಹಿಕೆಯಲ್ಲಿ ಭಾರತದ ಹಳ್ಳಿಯು ಹೇಗೆ ಕಾಣುತ್ತಿತ್ತು ಎಂಬುದೂ ಮುಖ್ಯವಾಗುತ್ತದೆ. ಗಾಂಧಿಯವರು ಹಳ್ಳಿಯನ್ನು ಸ್ವಯಂಭೂ ಸ್ವರ್ಗವಾಗಿಸುವ ಕನಸು ಕಂಡವರು; ಆದರೆ, ಅಂಬೇಡ್ಕರರು ಹಳ್ಳಿಗಳನ್ನು ನರಕದ ಕೂಪ ಅಂದುಕೊಂಡಿದ್ದರು. ಹಳ್ಳಿಯೇ ಭಾರತಕ್ಕೆ ಮೋಕ್ಷ ಎಂದು ಗಾಂಧಿ ಅಂದುಕೊಂಡಿದ್ದರೆ, ಅಂಬೇಡ್ಕರ್ ಭಾರತದಿಂದಲೇ ಹಳ್ಳಿಯನ್ನು ಮೋಕ್ಷ ಮಾಡಬೇಕು ಎಂದುಕೊಂಡಿದ್ದರು. ಒಬ್ಬರಿಗೆ ರಮ್ಯ ಕನಸಾದರೆ, ಇನ್ನೊಬ್ಬರಿಗೆ ಕಠೋರ ವಾಸ್ತವವಾಗಿತ್ತು – ಆಗ, ವಾಸ್ತವವೂ ಹಾಗೆ ಇತ್ತು. ಹಳ್ಳಿಗಳ ತಳ ಸಮುದಾಯಗಳು ಉಸಿರಾಡದೆ ಇದ್ದವು. ಆಗ, ಅಂಬೇಡ್ಕರರಿಗೆ ಹಳ್ಳಿಯು ಒಂದು ದು:ಸ್ವಪ್ನದಂತೆ ಕಂಡಿದ್ದರೆ ಅದರಲ್ಲೇನು ಆಶ್ಚರ್ಯ? ಆದರೆ, ಈಗಿನ ಯಾವುದೇ ಒಂದು ಹಳ್ಳಿ ನೋಡಿದರೆ, ಮಂಡಲ ಪಂಚಾಯತಿ ವ್ಯವಸ್ಥೆ ಬಂದ ಮೇಲೆ ಎಲ್ಲಾ ಜಾತಿಗಳ ಒಳಗೂ ನಾಕಾರು ಪಕ್ಷಗಳಿಗೆ ಅನುಗುಣವಾಗಿ ನಾಕಾರು ಗುಂಪುಗಳಾಗಿವೆ. ಇದು ಪಕ್ಷ ಸ್ಪರ್ಧೆ ಕಾರಣ ಎಂಬುದು ತಾತ್ಕಾಲಿಕ ನಿಜ. ಈ ಕ್ರಿಯೆಯ ಒಳಗೆ ಜಾತಿ ಬಿಟ್ಟ ಚಲನೆ ಸ್ವಲ್ಪವಾದರೂ ಇದೆ. ಇದನ್ನೂ ನಾವು ಗಮನಿಸಬೇಕು. ಜೊತೆಗೆ ಮಂಡಲ್ ಪಂಚಾಯತಿ ಅಧಿಕಾರ ಸ್ಥಾನಮಾನಗಳಿಗೆ ಮೀಸಲಾತಿ ಬಂದು ನಮ್ಮ ಜನರಲ್ಲೇ ದಲಿತ ಹೆಣ್ಣುಮಗಳೊಬ್ಬಳು ಅಧ್ಯಕ್ಷೆಯೂ ಆಗಿ ಬಿಟ್ಟಳು. ನನ್ನ ಬಾಲ್ಯದಲ್ಲಿ ಆ ಊರಿನ ಗ್ರಾಮ ಪಂಚಾಯ್ತಿ ಕಚೇರಿ ಒಳಕ್ಕೆ ಹೋಗುವುದನ್ನು ಕಲ್ಪಿಸಿಕೊಳ್ಳಲೂ ಕಷ್ಟವಾಗುತ್ತಿದ್ದ ನನಗೆ, ಇದೆಲ್ಲವೂ ಕಣ್ಣ ಮುಂದೆಯೇ ಕಂಡಿದೆ. ಈ ಚಲನೆಯನ್ನೂ ನಾವು ಕಾಣಬೇಕಲ್ಲವೆ?

ಈ ಗೊಂದಲದ ಒಳಗೆ ನಾವು ಗಾಂಧಿಯವರ ಸಮಕಾಲೀನರಾಗಿ ನೋಡಿದರೆ, ಗಾಂಧಿಯವರ 1920ರ ಸುಮಾರಿನ ಅಭಿಪ್ರಾಯಗಳನ್ನು (ಅಂದರೆ 1. ಹಿಂದೂ ಧರ್ಮವು ಜಾತಿಪದ್ಧತಿಯ ಆಧಾರದ ಮೇಲೆ ಸ್ಥಾಪಿತವಾಗಿದೆ 2. ಸ್ವರಾಜ್ಯದ ಬೀಜಗಳು ಜಾತಿಪದ್ಧತಿಯಲ್ಲಿವೆ 3. ಸಮಾಜದ ನಿಯಂತ್ರಣಕ್ಕೆ ಮತ್ತೊಂದು ಹೆಸರೇ ಜಾತಿ 4. ರಾಷ್ಟ್ರೀಯ ಏಕತೆಗೆ ಸಹಭೋಜನ, ಅಂತರ್ಜಾತಿ ವಿವಾಹಗಳ ಅಗತ್ಯವಿಲ್ಲ 5. ಜಾತಿಪದ್ಧತಿ ಸಮಾಜವೊಂದರ ಸ್ವಾಭಾವಿಕ ಶ್ರೇಣೀಕರಣ 6. ಜಾತಿಪದ್ಧತಿಯನ್ನು ನಾಶಪಡಿಸಲು ಯತ್ನಿಸುವ ಯಾರದೇ ಪ್ರಯತ್ನಗಳಿಗೂ ನನ್ನ ವಿರೋಧವಿದೆ ಇತ್ಯಾದಿ, ಇತ್ಯಾದಿ) ವಿರೋಧಿಸುವುದು ಸರಿ. 1920ರ ಆಜೂಬಾಜಿನ ಗಾಂಧಿ ಆಲೋಚನೆಗಳನ್ನು ನಾವೂ ಆ ಕಾಲಮಾನದಲ್ಲಿ ಇದ್ದರೆ ವಿರೋಧಿಸಬೇಕಾಗುತ್ತದೆ; ಅಂಬೇಡ್ಕರ್ ಅವರಷ್ಟೇ ಉಗ್ರವಾಗಿ ಪ್ರತಿಭಟಿಸಬೇಕಾಗುತ್ತದೆ.

ಆದರೆ, ಆ ಕರ್ಮಠ ಸನಾತನಿ ಗಾಂಧಿ ನಂತರದ ವರ್ಷಗಳಲ್ಲಿ ಅಲ್ಲೇ ಉಳಿಯಲಿಲ್ಲವಲ್ಲ; ಅವರು ದಿನದಿನವೂ ಸತ್ತು ದಿನದಿನವೂ ಹುಟ್ಟಿದರು. 1928ರ ಹೊತ್ತಿಗೆ ಒಂದೇ ವರ್ಣದ ಉಪಜಾತಿಗಳ ಜೊತೆ ಅಂತರ್ ವಿವಾಹವನ್ನು ಪ್ರೋತ್ಸಾಹಿಸುವ ಗಾಂಧಿ, ಒಂದೊಂದೇ ಹೆಜ್ಜೆ ಇಡುತ್ತ 1946ರ ಹೊತ್ತಿಗೆ ಸವರ್ಣ ಹಿಂದೂ ಮತ್ತು ಹರಿಜನರ ನಡುವೆ ನಡೆಯುವ ಅಂತರ್ ವಿವಾಹಗಳಿಗೆ ಮಾತ್ರವೇ ತಾವು ಹೋಗುವುದಾಗಿ ನೇಮ ಮಾಡಿಕೊಳ್ಳುತ್ತಾರೆ. ಮುಂದೆ, ವಧು–ವರ ಇಬ್ಬರಲ್ಲಿ ಒಬ್ಬರು ಹರಿಜನರಲ್ಲದ ಪಕ್ಷದಲ್ಲಿ ಸೇವಾಗ್ರಾಮದಲ್ಲಿ ಅಂಥವರಿಗೆ ಮದುವೆಯಾಗುವ ಅವಕಾಶವನ್ನೇ ನಿರಾಕರಿಸುತ್ತಾರೆ. ಇನ್ನೂ ಮುಂದೆ 'ನಾವು ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಬೇಕೆಂದರೆ, ಜಾತಿಯೂ ಹೋಗಲೇಬೇಕು' ಎಂಬಲ್ಲಿಗೆ ಬಂದು ನಿಲ್ಲುತ್ತಾರೆ. 1946ರ ಗಾಂಧಿ ಆಲೋಚನೆಗಳು 1920ರಲ್ಲೇ ಕಾಣಿಸಿಕೊಂಡಿದ್ದರೆ ಏನಾಗುತ್ತಿತ್ತು? ಭಾರತದ ಜಾತಿ–ಧರ್ಮಗಳು ಆ ಗಾಂಧಿಯನ್ನೇ ಅಡ್ಡಡ್ಡ ನುಂಗಿ ನೊಣೆದುಬಿಡುತ್ತಿದ್ದವು. ಆಗ ಈ ಗಾಂಧಿಯೇ

ಇರುತ್ತಿರಲಿಲ್ಲ. ಜೊತೆಗೆ, ಭಾರತೀಯ ಜಾತಿ-ವರ್ಣ ಸಮಾಜವು ಸ್ವಲ್ಪವೂ ಅಲುಗಾಡದೆ, ತಲೆ ಎತ್ತುವ ಅಸ್ಪೃಶ್ಯರ ಬಲಿ ತೆಗೆದುಕೊಳ್ಳುವುದನ್ನೇ ಧರ್ಮ ಎಂದುಕೊಳ್ಳುತ್ತಿತ್ತು. ಇದನ್ನೂ ನಾವು ಕಾಣಬೇಕು.

ಆದರೂ, ಅಷ್ಟೊಂದು ಬೆಳವಣಿಗೆ ಒಂದೇ ಜೀವಿತದಲ್ಲಿ ಆಗುವ ಗಾಂಧಿಯು ವೃತ್ತಿ ಬಗ್ಗೆ ಮಾತ್ರ ಕೌಶಲದ ಕಾರಣವಾಗಿ ವಂಶವೃತ್ತಿ ಹೇಳುತ್ತಿದ್ದುದನ್ನು ಕೊನೆಯವರೆಗೂ ಉಳಿಸಿಕೊಂಡರೇ? ನನಗೆ ಗೊತ್ತಿಲ್ಲ. ಯಾವುದೇ ವೃತ್ತಿ ಯಾದರೂ ಜೀವನ ನಿರ್ವಹಣೆಗೆ ಆಗುವಷ್ಟು ಮಾತ್ರ ವೇತನ ಎಂಬ ಆಶಯ ಅವರಿಗೆ ಇದ್ದರೂ, ಅವರ ಈ ವಂಶವೃತ್ತಿ ಅಭಿಪ್ರಾಯವನ್ನು ಸಹಿಸುವುದು ಕಷ್ಟವಾಗುತ್ತದೆ. ಏಕೆಂದರೆ, ವಂಶವೃತ್ತಿಯಲ್ಲಿ ಕೌಶಲ ಹೆಚ್ಚಿದರೂ, ಅದು ಯಾಂತ್ರಿಕವಾಗಿ ಕೊನೆಯಾಗುತ್ತದೆ. ಆದರೆ, ವಂಶವೃತ್ತಿ ಬದಲಾವಣೆಯಲ್ಲಿ ಆ ವೃತ್ತಿಗೇನೆ ಸೃಜನಶೀಲತೆ ಉಂಟಾಗಿ ಹೊಸ ಸಧ್ಯತೆಗಳು ಹೆಚ್ಚುತ್ತವೆ ಇದನ್ನು ಸದಾ ಚಲಿಸುವ ಗಾಂಧಿಗೆ ಮನದಟ್ಟು ಮಾಡಲು ನಾವು ಅವರೊಡನೆ ಒಂದು ಸಣ್ಣ ಜಗಳ ಮಾಡಬೇಕಿದೆ.



ಪ್ರತಿಯೊಬ್ಬರೂ ಪೌರಕಾರ್ಮಿಕರಾಗಬೇಕು.
-ಗಾಂಧೀಜಿ
'ದ ಮೈಂಡ್ ಆಫ್ ಮಹಾತ್ಮಾ ಗಾಂಧಿ'
ಪುಟ-200

ವರ್ಗರಹಿತವಾದ, ಜಾತಿರಹಿತವಾದ ಸಮಾಜವನ್ನು ನಿರ್ಮಿಸಲು ತಾನು ಪ್ರಯತ್ನಿಸುತ್ತಿರುವುದಾಗಿ ಗಾಂಧಿ ಹೇಳುತ್ತಾ, ಭಾರತದಲ್ಲಿ ಒಂದೇ ಜಾತಿಯು ಉಳಿದಿರುವಂಥ ಮತ್ತು ಬ್ರಾಹ್ಮಣರು ಹರಿಜನರನ್ನು ಸಹಜವಾಗಿ ಮದುವೆ ಆಗುವಂಥ ಸಮಾಜಕ್ಕಾಗಿ ಗಾಂಧಿ ಹಂಬಲಿಸುತ್ತಾರೆ. 1946ರಲ್ಲಿ ಈ ಬಗ್ಗೆ ಅವರು 'ಅಸಮಾನತೆಯಿಂದ ಹಿಂಸೆಯು ಹುಟ್ಟಿಕೊಳ್ಳುತ್ತದೆ ಮತ್ತು ಸಮಾನತೆಯಿಂದ ಅಹಿಂಸೆಯು ಹುಟ್ಟಿಕೊಳ್ಳುತ್ತದೆ' ಎಂಬ ಮಾತನ್ನು ಹೇಳಿ, ಅಹಿಂಸೆ ಮತ್ತು ಸಮಾನತೆಯನ್ನು ಒಂದೇ ನಾಣ್ಯ ಮಾಡಿ ಬಿಡುತ್ತಾರೆ. ತನ್ನ ದರ್ಶನದ ಅಂತಿಮ ಸ್ಥಿತಿಯಲ್ಲಿ *state withers away* ಎಂಬ ಮಹಾವಾಕ್ಯ ನೀಡಿದ ಮಾರ್ಕ್ಸ್‌ನ ಕಾಣ್ಕೆಗೆ ಈ ನುಡಿ ಸರಿಸಮವಾಗಿದೆ.

ಗಾಂಧಿ-ಅಂಬೇಡ್ಕರ್ ಇಬ್ಬರೂ ಕೊನೆಗೆ ತಲುಪಿದ ಸ್ಥಿತಿಯಲ್ಲಿ ಅವರನ್ನು ನೋಡಿದಾಗ, ಅವರು ಇಂದು ಬದುಕಿದ್ದರೆ, ಎಲ್ಲಿರುತ್ತಿದ್ದರು? ಹೇಗಿರುತ್ತಿದ್ದರು? ವೃದ್ಧಾಶ್ರಮ ವೊಂದಕ್ಕೆ ಎಸೆಯಲ್ಪಟ್ಟು ಒಂದೇ ಕಡೆ ವಾಸಿಸುತ್ತಾ, ಅವರ ಗೊಣಗಾಟ ಇವರಿಗೆ ಮಾತ್ರ-ಇವರ ಗೊಣಗಾಟ ಅವರಿಗೆ ಮಾತ್ರ ಕೇಳಿಸುತ್ತಾ, ತಮ್ಮ ಕಣ್ಮುಂದೆ ಜರುಗುತ್ತಿರು ವುದನ್ನೆಲ್ಲಾ ಅಸಹಾಯಕರಾಗಿ, ತಲೆ ಮೇಲೆ ಕೈಯಿಟ್ಟು ಆಕಾಶ ನೋಡು ತ್ತಿರುತ್ತಿದ್ದರೆ? ಆಗಾಗ ಅವರಲ್ಲಿಗೆ ಹೋಗಿ, ಚೇಷ್ಟೆ-ಕೀಟಲೆ ಮಾಡುವ ಡಿ.ಆರ್.ನಾಗರಾಜ್ ಎಂಬ ಬಚ್ಚಾ ಹೇಳಿದ ಒಂದು ಮಾತು: 'ಹಳ್ಳಿಯ ಜೀವಂತ ಸಂದರ್ಭದೊಳಗೆ ಅಂಬೇಡ್ಕರ್ ವಾದಿಯಾಗಿ ಹಾಗೂ ಅದರ ಹೊರಗೆ ಗಾಂಧಿ ವಾದಿಯಾಗಿ ಕಂಡರೆ ಅದು ಅಧಿಕೃತವಾದದ್ದು' ಎಂಬ ಆ ನುಡಿಯೊಳಗೆ ತಮಗೂ ತಿಳಿಯದಿದ್ದ ನಿಧಿ ಅಡಗಿದೆ ಎಂದು ಗಾಂದಿ-ಅಂಬೇಡ್ಕರರಿಗೂ ಅನಿಸಿ, ಆ ನಿಧಿಯ ಗೆಜ್ಜೆ ಸದ್ದು ಆಲಿಸಿ ಎಂದು ಈ ಇಬ್ಬರೂ ಕೂಗಿ ಕೂಗಿ ಹೇಳಿಯೂ ಕೂಡ, ಕೇಳಿಸಿಕೊಳ್ಳದ ಜನಸ್ತೋಮವನ್ನು ಕಂಡು ತಾವು ಸತ್ತವರ ನಡುವೆ ಬದುಕಿತ್ತಿದೇವೇನೋ ಎಂದು ಅನ್ನಿಸಿ, ದಿಕ್ಕು ಕಾಣದೆ ಆ ಇಬ್ಬರೂ ತಮ್ಮ ಸಾವಿಗಾಗಿ ಪ್ರಾರ್ಥನೆ ಮಾಡುತ್ತಿರು ವಂತೆ ಗೋಚರಿಸುತ್ತಾರೆ.

ಈ ದೃಶ್ಯಾವಳಿ ನಮ್ಮ ಕಣ್ಮುಂದೆ ಬರಬಾರದು. ಅದಕ್ಕೆ ಬೇಕಾಗಿರುವುದು ಇಷ್ಟು: ನಾವು ಈ ಇಬ್ಬರ ಸಮಕಾಲೀನ ರಾದರೆ ಜಗಳ ಅನಿವಾರ್ಯ. ಅಲ್ಲಿ-ಇಲ್ಲಿ ಸ್ವಲ್ಪ ಸಮೀಪಕ್ಕೆ ಬರಬಹುದು. ಆದರೆ, ಇಡಿಯಾಗಿ ನೋಡಿದರೆ, ಅವರಿಬ್ಬರ ನಡುವಿನ ಜಗಳವೂ ಸರಸ ಆಗಲೂಬಹುದು. ಅವರಲ್ಲಿ ಯಾರು ಗಂಡು ಯಾರು ಹೆಣ್ಣು ಎಂದು ನಿರ್ಣಿಸಲು ಅವರವರ ಭಾವಕ್ಕೆ ಬಿಡುವೆ. ಏಕೆಂದರೆ, 'ಅಂಬೇಡ್ಕರ್ ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡು ಹೊರಗೆ ಇರುವ ಮಗ' ಎಂದು ನಾನು ಹೇಳಿದ್ದರಲ್ಲಿ, ಮಗ ಎಂದರೆ ಹಕ್ಕಿರುವ ವಾರಸುದಾರ ಆಗಿದ್ದಾನೆ ಎಂಬರ್ಥದಲ್ಲಿ ಗ್ರಹಿಸದೆ ಕೆಲವರು ಪದಪದಾರ್ಥ ಅರ್ಥ ಮಾಡಿಕೊಂಡು ಬಿಟ್ಟರು. ಇದಕ್ಕಾಗಿ ಇದನ್ನು ಅವರವರ ಭಾವಕ್ಕೆ ಬಿಡುವೆ. ಆದರೆ, ನಾವು ಗೋರಿ ಅಗೆದು, ಈ ಇಬ್ಬರ ಮೂಳೆಗಳನ್ನು ಎಣಿಸುತ್ತಾ, ಪೂಜಿಸುತ್ತಾ, ತರ್ಕಿಸುತ್ತಾ ಭೇದ ಹುಡುಕುತ್ತಾ ಮಡಿ ಮಾಡಿ ಅವರು ಮಡಿಯುವಂತೆ ಮಾಡುತ್ತಿರುವುದನ್ನು ಕೈಬಿಡಬೇಕಾಗಿದೆ. ಈಗ ಈ ಇಬ್ಬರನ್ನೂ ನಾವು ಜೊತೆಗೂಡಿಸಿ ಒಳಗೊಂಡರೆ, ಅವರು

ಬಡಿದಾಡುತ್ತಿದ್ದ ಕಾಲಮಾನದಲ್ಲಿ ಕಪ್ಪು ಬಣ್ಣವು ಕಪ್ಪು ಬಣ್ಣ ಮಾತ್ರವಾಗಿತ್ತು. ಬಿಳಿಯ ಬಣ್ಣವು ಬಿಳಿಯ ಬಣ್ಣ ಮಾತ್ರವಾಗಿತ್ತು. ಇಂದು ಕಪ್ಪು ಬಣ್ಣದೊಳಗೇನೆ ಸಾವಿರಾರು ಬಣಗಳಾಗಿಬಿಟ್ಟಿವೆ. ಬಿಳಿಯ ಬಣ್ಣದೊಳಗೂ ಸಾವಿರಾರು ಬಣಗಳಿವೆ. ಬಣ ಬಣಗಳಿಗೆ ತಕ್ಕಂತೆ ಸುಲಿಗೆಗಳೂ ಥರಾವರಿಯಾಗಿ, ಆ ಸಂಖ್ಯೆಯೂ ವಿಪುಲವಾಗುತ್ತಿವೆ. ಜೊತೆಗೆ, ಸುಲಿಗೆ ಇಂದು ಸುಲಿಗೆಯಾಗಿ ಸುಲಿಯುತ್ತಿಲ್ಲ. ರಕ್ಷಕರ ಮುಖವಾಡ ಹಾಕಿ ಸುಲಿಯುತ್ತಿದೆ. ಇದನ್ನು ಮಕ್ಕಳ ಮನರಂಜನಾ ಕಥೆಯಾಗಿಸಿ, ಎಳೆಯ ಮಕ್ಕಳಲ್ಲೇ ಅಂದರೆ ಗಿಡವಾಗಿದ್ದಾಗಲೇ ಬಗ್ಗಿಸಿ, ಸುಲಿಗೆಯನ್ನು ಒಪ್ಪಿತ ಮೌಲ್ಯವಾಗಿಸುವ ಹೊಸ ಹೊಸ ಬಲೆಗಳನ್ನು ಈ ಭೂಮಿ ಮೇಲೆ ನೇಯಲಾಗುತ್ತಿದೆ.

ಗೆಳೆಯ ರಾಜೇಂದ್ರ ಚೆನ್ನಿ ತಮ್ಮ 'ದಂತಯಗೋಪುರ ಮತ್ತು ಮಾರುಕಟ್ಟೆ ರಾಜಕೀಯ' ಲೇಖನದಲ್ಲಿ "ನಾವು 'ಕಾಮಿಕ್ಸ್‌ಗಳಲ್ಲಿ ವಸಾಹತುಶಾಹಿ ಒಳಚರಿತ್ರೆಗಳಿವೆ' ಎಂದು ಹೇಳುತ್ತಾ 'ಆದಿವಾಸಿಗಳ ಮೇಲೆ ಹುಕುಂ ಮಾಡುವ ಫ್ಯಾಂಟಮ್, ಆಫ್ರಿಕಾವನ್ನು ವಸಾಹತುವನ್ನಾಗಿ ಮಾಡಿದ ಬಿಳಿಯರ ಮೂಲಮಾದರಿ' ಎನ್ನುವುದನ್ನೂ, ಹಾಗೆಯೆ 'ನಿಸರ್ಗ ಮತ್ತು ಪ್ರಾಣಿಗಳ ಮೇಲೆ ರಮ್ಯವಾದ ರೀತಿಯಲ್ಲಿ ಆಳ್ವಿಕೆ ಮಾಡುವ ಟಾರ್ಜನ್, ನಿಸರ್ಗದ ಮೇಲೆ ದಾಳಿ ಮಾಡಿ ಅದನ್ನು ಬಳಸಿಕೊಳ್ಳುವ ಯುರೋಪಿಯನ್ನರ ಸಂಕೇತ'. ಎಂಬುದನ್ನು ಮರೆಯುತ್ತೇವೆ" ಎಂದು ಅಪೂರ್ವ ಒಳನೋಟ ನೀಡುತ್ತಾರೆ. ಚಿಂತಕ ಜೆರೆಮಿ ಸೀಬ್ರೂಕ್ "ನಮಗೆ 'ಜಗತ್ತಿನ ಕಾರ್ಮಿಕರೆಲ್ಲರೂ ಒಟ್ಟಾಗಿ ಜಗತ್ತನ್ನು ದಾಸ್ಯದಿಂದ ವಿಮುಕ್ತಗೊಳಿಸಬಲ್ಲರು ಎಂಬ ಚಿಂತನೆ ದುರ್ಬಲಗೊಂಡಿದೆ; ಈಗ 'ನಮಗೆ ಬೇಕಿರುವುದೆಲ್ಲವನ್ನೂ ಬಂಡವಾಳಶಾಹಿಯ ಮೂಲಕ ಮಾತ್ರ ಪಡೆದುಕೊಳ್ಳಲು ಸಾಧ್ಯ' ಎಂಬ ಪುರಾಣವನ್ನು ಸೃಷ್ಟಿಸಲಾಗಿದೆ" ಎನ್ನುತ್ತಾರೆ.

ಇಂದು ಜೀವನ ಎಂದರೆ, ಹಣದಿಂದ ಹಣಕ್ಕಾಗಿ ಮತ್ತು ಹಣಕ್ಕೋಸ್ಕರ ಎಂಬಂತಾಗಿಬಿಟ್ಟಿದೆ. ಸಮಾನತೆ, ಸಮತ್ವದ ಆಶಯಗಳು ಕಣ್ಣು–ಬಾಯಿ ಬಿಡುತ್ತಿವೆ. ಬಂಡವಾಳ ಶಾಹಿಯೇ ಇಂದು ಜಗತ್ತಿನ ಹಸಿವಿನ ಬಗ್ಗೆ ಮಾತಾಡುತ್ತಿದೆ. ಉದ್ಯೋಗದ ಬಗ್ಗೆ ಮಾತಾಡುತ್ತಿದೆ. ಬಡವರ ಉದ್ಧಾರ ತನ್ನ ಕೈಲಿ ಮಾತ್ರ ಎಂಬಂತೆ ಬಿಂಬಿಸಿಕೊಂಡು ನಂಬಿಸುತ್ತಿದೆ. ಮಾಟ–ಮಂತ್ರ, ಮಾಯಾಬಜಾರ್ ಎಲ್ಲವೂ ವಿಜ್ಞಾನದ ಭಾಷೆಯಲ್ಲಿ ಮಾತಾಡುತ್ತಿವೆ.

ಹೀಗಿರುವಾಗ ವಿಮೋಚನೆ ಹೇಗೆ? ವಿಮೋಚಕರು ಯಾರು? ಖಳನಾಯಕನು ನಾಯಕನನ್ನು ತುಳಿದಿಟ್ಟು, ತಾನೇ ನಾಯಕನ ಮಾತುಗಳನ್ನು ಆಡುತ್ತಿದ್ದಾನೆ. ಜನರು ಮರುಳಾಗುತ್ತಿದ್ದಾರೆ. ಜೊತೆಗೆ, ಈ ಕಾಲ ಮಾಹಿತಿಯ ಯುಗ. ಮನುಷ್ಯ ಹೆಚ್ಚುಚ್ಚು ಎಚ್ಚರವನ್ನೂ ಪಡೆಯುತ್ತಿದ್ದಾರೆ. ಎಚ್ಚರ ಇಲ್ಲದಿದ್ದಾಗ ಅಸಮಾನತೆ, ತಾರತಮ್ಯಗಳು ಇದ್ದರೂ ಹಿಂದೆ ಎಂಥದೊ ಜಡ ಜಡ್ಡು ನೆಮ್ಮದಿ ಇದ್ದರೆ, ಇಂದು ಎಚ್ಚರದೊಡನೆ ತಾರತಮ್ಯ–ಅಸಮಾನತೆಗಳು ಉಲ್ಬಣಗೊಂಡು ನೆಮ್ಮದಿಗೆಟ್ಟು ಭೂಮಿ ಬೇಯುತ್ತಿದೆ.

ಹೀಗಿದ್ದೂ, ಸಮಾನತೆ–ಸಮತ್ವದ ಕನಸನ್ನು ಸಾಕ್ಷಾತ್ಕರಿಸಬೇಕಾದ ಸಂಘಟನೆಗಳು, ಪಕ್ಷಗಳು ಒಟ್ಟಾಗುತ್ತಿಲ್ಲ. ತಮ್ಮ ತಮ್ಮ ಸೈದ್ಧಾಂತಿಕತೆಗೆ ಅನುಗುಣವಾಗಿ ತಮ್ಮವೇ ಪ್ರತ್ಯೇಕ ಶತೃಗಳನ್ನು ಗುರುತಿಸಿಕೊಂಡು, ಆ ಶತೃಗಳಿಗೆ ತಕ್ಕಂತೆ ತಮ್ಮ ಪ್ರತ್ಯೇಕತೆಯನ್ನು ಆಚರಿಸುತ್ತಿವೆ. ಮಡಿ ಮಾಡ್ತಾರಲ್ಲ ಹಾಗೆ. ಕಾಲಾನುಕ್ರಮದಲ್ಲಿ ಜಡತೆ ಆವರಿಸಿಕೊಂಡಾಗ, ಅವರು ಗುರುತಿಸಿಕೊಂಡಿದ್ದ ಶತೃ ಮರೆತು ಹೋಗಿ, ಅವರ ಅಕ್ಕಪಕ್ಕದವರೇ ಶತೃಗಳಾಗಿ ಬಿಡಬಹುದು. ಇದೂ ಆಗುತ್ತಿದೆ. ಹೀಗಿರುವಾಗ ತುಳಿತಕ್ಕೆ ಒಳಗಾದ ಜನತೆ ಒಟ್ಟಾಗುವುದೆಲ್ಲಿ ಬಂತು? ಇದರೊಡನೆ ಖಾಸಗಿ ಬಂಡವಾಳದ ಕೃಪಾಪೋಷಿತ ಕೆಲವು ಎನ್.ಜಿ.ಒ.ಗಳು ಜನಪರಶಕ್ತಿಗಳಿಗಿಂತಲೂ ಹೆಚ್ಚು ಜನಪರವಾಗಿ ಮಾತಾಡುತ್ತಾ, ಜನಪರ ಆಂದೋಲನಗಳಿಗೆ ತೊಡರುಗಾಲು ಹಾಕುತ್ತಿವೆ. ಜೊತೆಗೆ, ಸಮತ್ವ–ಸಮಾನತೆ ಆಶಯದ ದಲಿತ, ಮಹಿಳೆ, ಪರಸರ, ರೈತ ಮುಂತಾದ ಸಂಘಟನೆಗಳು. ಪಕ್ಷಗಳು ತಮ್ಮ ತಮ್ಮ ಐಡೆಂಟಿಟಿ ರಾಜಕಾರಣವನ್ನೇ ಆನೆಕಾಲು ರೋಗದಂತೆ ದೊಡ್ಡದು ಮಾಡಿಕೊಂಡು, ಸಮತ್ವ–ಸಮಾನತೆಯನ್ನು ಮರೆತು ತೆವಳುತ್ತಿವೆ. ಇದುವರೆಗಿನ ಭೂಮಿ ಮೇಲಿನ ಶೋಷಣೆಯ ಇತಿಹಾಸದಲ್ಲಿ ಪ್ರಕೃತಿ ನಾಳೆಗೂ ಉಳಿಯುತ್ತಿತ್ತು. ಇಂದಿನ ಜಾಗತೀಕರಣ–ಖಾಸಗೀಕರಣದ ದಾಹದಲ್ಲಿ ಪ್ರಕೃತಿ ನಾಳೆಗೆ ಉಳಿಯುವು ದಿಲ್ಲವೇನೊ ಎಂಬಷ್ಟು ವೇಗವಾಗಿ ಧ್ವಂಸೀಕರಣ ನಡೆಯುತ್ತಿದೆ.

ಈ ಧ್ವಂಸೀಕರಣ ಯುಗದಲ್ಲಿ ಗಾಂಧಿ ಒಬ್ಬ ಸಾಕೆ? ಅಂಬೇಡ್ಕರ್ ಒಬ್ಬ ಸಾಕೆ? ಈ ಇಬ್ಬರೂ ಜೊತೆಗೂಡಿದರೆ ಸಾಕೆ? ಇವರೊಂದಿಗೆ ಲೋಹಿಯಾ ಸೇರಿದರೆ ಸಾಕೆ?

ಸಾಲದು ಎನಿಸುತ್ತದೆ. ನಮಗೆ ಬುದ್ಧ, ವಚನಕಾರರ ಸ್ಪರ್ಶವೂ ಬೇಕಾಗಿದೆ. ಮಹರ್ಷಿ ಮಾರ್ಕ್ಸ್‌ನನ್ನೂ ಇವರೊಂದಿಗೆ ಜೊತೆಗೂಡಿಸಬೇಕಿದೆ. ಅಷ್ಟೂ ಸಾಲದು.

ತಮಗೆ ಬೇಕಾದವರು ಒಬ್ಬರೇ ಸಾಕು ಎನ್ನುವವರು ಹೆಣದ ಮುಂದೆ ಎದೆ ಬಡಿದುಕೊಂಡು ಗೋಳಾಡುತ್ತಿರು ವವರಂತೆ ಕಾಣಿಸುತ್ತಾರೆ. ಒಂದು ಸಲ ನಾವು ಕೊಡವಿಕೊಂಡು ಪೊರೆ ಕಳಚಿ ಮರುಹುಟ್ಟು ಪಡೆಯಬೇಕಾಗಿದೆ.

■

ಪರಿವರ್ತನೆ ಮೊದಲು ನಮ್ಮಿಂದಲೇ ಪ್ರಾರಂಭವಾಗಲಿ

–ಡಾ॥ ಎಚ್. ಎಸ್. ದೊರೆಸ್ವಾಮಿ

ಗಾಂಧೀಜಿ 'ಸರ್ವೋದಯ' ಎಂಬ ಅರ್ಥ ಪೂರ್ಣ ಕನಸನ್ನು ಕಂಡಿದ್ದರು. ಅದು ನನಸಾಗಬೇಕಾದರೆ, ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರುವ ಕೆಲಸವು ಪ್ರಾಮಾಣಿಕವಾಗಿ ನಡೆಯಬೇಕು. ಅಹಿಂಸೆ ಮತ್ತು ಸತ್ಯದ ನೆಲೆಯಲ್ಲಿ ನೋಡಿದರೆ, ಮಹಾತ್ಮಾ ಗಾಂಧೀಜಿ ಇಂದಿಗೆ ಕೂಡ ಅತಿ ಪ್ರಸ್ತುತರಾಗುತ್ತಾರೆ. ಅವರು ತಿಳಿಸಿದ ಗ್ರಾಮಸ್ವರಾಜ್ ಪರಿಕಲ್ಪನೆಯನ್ನು ಪರಿಪೂರ್ಣವಾಗಿ ಜಾರಿಗೆ ತರಲು ನಿಷ್ಠಾಪೂರ್ವಕ್ ಪ್ರಯತ್ನಗಳು ನಡೆಯಬೇಕು. ಸಮಾಜ ಪರಿವರ್ತನೆಯು ನಮ್ಮನ್ನು ಪರಿವರ್ತನೆ ಮಾಡಿಕೊಳ್ಳುವ ಪ್ರಥಮ ಹೆಜ್ಜೆಯಿಂದಲೇ ಪ್ರಾರಂಭವಾಗಬೇಕು ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ। ಎಚ್.ಎಸ್. ದೊರೆಸ್ವಾಮಿ ಅವರು ತಿಳಿಸಿದರು.

ಅವರು ರಾಮನಗರ ಜಿಲ್ಲಾ ಕೇಂದ್ರದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಸಂಘಟಿಸಿದ ಅಂತರ ವಿಶ್ವ ವಿದ್ಯಾಲಯ ಮಟ್ಟದ 'ಯುವಜನತೆಗೆ ಗಾಂಧೀಜಿ ವಿಚಾರ' ಶಿಬಿರದ ಉದ್ಘಾಟನೆ ಮಾಡುತ್ತಾ ಈ ಮಾತುಗಳನ್ನು ಹೇಳಿದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಸಂಯುಕ್ತ ಆಶ್ರಯದಲ್ಲಿ ಈ ಶಿಬಿರ ನಡೆಯಿತು.

ಶಿಬಿರದಲ್ಲಿ ಒಂದನೇ ಗೋಷ್ಠಿಯಲ್ಲಿ ಉಪನ್ಯಾಸ ನೀಡಿದ ಡಾ। ಮೀನಾ ದೇಶಪಾಂಡೆ, ಬೆಂಗಳೂರು ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು 'ಗಾಂಧೀಜಿ ವಿಶ್ವ ಕಂಡ ಮಹಾನ್ ಶಾಂತಿದೂತ; ಅವರು



ಅಹಿಂಸೆಯ ಮೂಲಕವೇ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಗಾಂಧೀಜಿ ವಿಚಾರಗಳು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಒಂದು ನೂರು ಸಂಪುಟ ಗಳಲ್ಲಿ ಲಭ್ಯವಿದೆ. ಇದನ್ನು ಕನ್ನಡ ಭಾಷೆಗೆ ಅನುವಾದಿಸ ಲಾಗುತ್ತಿದೆ. ಇದನ್ನು ಎಲ್ಲ ಯುವಜನರು ಓದಬೇಕು; ಅರ್ಥ ಮಾಡಿಕೊಳ್ಳಬೇಕು; ತಮ್ಮ ಜೀವನದಲ್ಲಿ ಅಳವಡಿಸ ಬೇಕು. ಗಾಂಧೀಜಿಯವರ ವ್ಯಕ್ತಿತ್ವವು ನಮ್ಮ ಹೃದಯ ದೊಳಕ್ಕೆ ಇಳಿಯಬೇಕು' ಎಂದು ತಿಳಿಸಿದರು.

ಈ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಶ್ರೀ ಎಂ.ಸಿ.ನರೇಂದ್ರ, ಗೌರವ ಕಾರ್ಯದರ್ಶಿ, ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಸಂಸ್ಥೆ, ಬೆಂಗಳೂರು ಇವರು ಆಗಮಿಸಿ ದ್ದರು. ಅಧ್ಯಕ್ಷತೆಯನ್ನು ಪ್ರೊ। ವಿ.ರಾಜಣ್ಣ ವಹಿಸಿದ್ದರು. ಶಿಬಿರದ ಸಂಚಾಲಕರಾದ ಡಾ। ಆಬಿದಾ ಬೇಗಂ ಉಪಸ್ಥಿತರಿದ್ದರು.

ಎರಡನೇ ಗೋಷ್ಠಿಯಲ್ಲಿ ಹಿರಿಯ ಗಾಂಧಿವಾದಿ ಶ್ರೀ ಎಂ.ಬಸವಯ್ಯ, ಸಂಸ್ಥಾಪಕರು, ಬಾಪೂಜಿ ವಿದ್ಯಾ ಸಂಸ್ಥೆ, ತುಮಕೂರು ಇವರು ಮಾತನಾಡಿ 'ಗಾಂಧೀಜಿ ಜೀವನ ಆತ್ಮಕತೆ ಒಂದು ಮಹಾಕಾವ್ಯವಾಗಿದೆ. ಅದನ್ನು ಸಾವಧಾನವಾಗಿ ಓದಿಕೊಂಡು, ನಮ್ಮ ಮನಸಿಗೆ ತೆಗೆದು ಕೊಳ್ಳುವ ಅವಶ್ಯಕತೆ ಇದೆ' ಎಂದು ತಿಳಿಸಿದರು.

ಬೆಂಗಳೂರು, ಮೈಸೂರು ಮತ್ತು ತುಮಕೂರು ವಿಶ್ವವಿದ್ಯಾಲಯಗಳ ವಿವಿಧ ಕಾಲೇಜುಗಳ ಆಯ್ದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಈ ಶಿಬಿರದಲ್ಲಿ ಭಾಗವಹಿಸಿ, ಶಿಸ್ತಿನಿಂದಿದ್ದು, ಮನಸುಗೊಟ್ಟು ಎಲ್ಲಾ ವಿಚಾರಗಳನ್ನು ತಿಳಿದುಕೊಂಡರು.

ಶಿಬಿರದ ಭಾಗವಾಗಿ ಪ್ರಬಂಧಗಳನ್ನು ಮಂಡನೆ ಮಾಡುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿತ್ತು. ಒಟ್ಟು 20 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದರು. ಅವರಲ್ಲಿ ಮೊದಲನೇ ಬಹುಮಾನ ಕನಕಪುರದ ರೂರಲ್ ಕಾಲೇಜಿನ ವಿದ್ಯಾರ್ಥಿಗೆ, ಎರಡನೇ ಬಹುಮಾನ ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗೆ ಮತ್ತು ತೃತೀಯ ಬಹುಮಾನ ಭಾರತೀ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗೆ ದೊರಕಿತ್ತು. ■

ಮುಲ್ಕರಾಜ್ ಆನಂದ್ ಸಾಹಿತ್ಯದ ಮೇಲೆ

ಗಾಂಧೀಜಿ ಪ್ರಭಾವ

20ನೇ ಶತಮಾನದಲ್ಲಿ ಇಂಗ್ಲೀಷ್ ಭಾಷೆ ಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿ, ವಿಶ್ವದ ಮತ್ತು ಸಮಸ್ತ ಭಾರತೀಯರ ಮತ್ತು ವಿದೇಶೀಯರ ಗಮನವನ್ನು ವಿಶೇಷವಾಗಿ ಸೆಳೆದ ಮುಲ್ಕರಾಜ್ ಆನಂದ್ ತಮ್ಮ ಕೃತಿಗಳನ್ನು ರಚಿಸಿದ್ದುದು ಸರಿಸುಮಾರು ಭಾರತವು ಸ್ವಾತಂತ್ರ್ಯಕ್ಕಾಗಿ ಆಂದೋಲನ ನಡೆಸಿದ ಕಾಲದಲ್ಲಿ. 1857ರ ಕಾಲ ದಲ್ಲೇ –ಅಸ್ಪಷ್ಟವಾಗಿಯಾದರೂ ಸರಿ– ಮೊಳಕೆ ಯೊಡೆದಿದ್ದ 'ಭಾರತೀಯ ರಾಷ್ಟ್ರೀಯತೆ' ಗಾಂಧೀಜಿ ನೇತೃತ್ವದಲ್ಲಿ ಕಾಂಗ್ರೆಸ್ ನಡೆಸಿದ ಹೋರಾಟದಲ್ಲಿ ಖಚಿತ ರೂಪವನ್ನು ತಳೆಯ ತೊಡಗಿತ್ತು.

ಆನಂದ್ ಅವರ ಕಾದಂಬರಿಗಳು ಭಾರ ತೀಯ ಸಮಾಜದಲ್ಲಿನ ತಳಸಮುದಾಯಗಳ ಶೋಚನೀಯ ಬದುಕನ್ನು ಪ್ರಧಾನವಾಗಿ ಚಿತ್ರಿಸುತ್ತವೆ. ಬಡವರು, ನಿರ್ಲಕ್ಷಿತರು, ಅಸಹಾಯಕರು ಅಲ್ಲಿ ಪ್ರಧಾನ ಪಾತ್ರಗಳು. ಜಾತಿಯನ್ನು ಅದರ ಎಲ್ಲಾ ದಾರುಣತೆಯೊಂದಿಗೆ ಚಿತ್ರಿಸಿದ ಹೆಗ್ಗಳಿಕೆ ಇವರದು. ಭಾರತೀಯ ರಾಷ್ಟ್ರೀಯತೆಯು ಪರಿಪಕ್ವವಾಗುವುದಕ್ಕೆ ಬಡತನ ಮತ್ತು ಜಾತೀಯತೆಗಳು –ಅನಕ್ಷರತೆ ಮತ್ತು ಇತರ ಸಾಮಾಜಿಕ ಪಿಡುಗುಗಳ ಜೊತೆಗೆ– ಅಡ್ಡಿಯಾಗಿವೆ ಎಂಬುದನ್ನು ಅತ್ಯಂತ ನಿಖರವಾಗಿ ಈ ಕಾದಂಬರಿಗಳು ದಾಖಲಿಸಿವೆ.

ಆನಂದ್ ಅವರ ಪ್ರಮುಖ ಕಾದಂಬರಿ ಗಳು 'ಅನ್‌ಟಚೆಬಲ್'(1935), ಇದರಲ್ಲಿ ಸನಾತನ ವಾದದ ಪ್ರಬಲ ಖಂಡನೆಯನ್ನು ಕಾಣುತ್ತೇವೆ. ಕಸ ಗುಡಿಸುವ ಲಖಾನ ಮಗ ಬಖಾ ಶೌಚಾಲಯ ಶುಚಿಗೊಳಿಸುವ ವೃತ್ತಿಗೆ ಬಾಲ್ಯದಲ್ಲೇ ಇಳಿಯ ಬೇಕಾಗಿ ಬರುತ್ತದೆ. ಜಾತೀಯತೆ ಮತ್ತು ಅಸ್ಪೃಶ್ಯತೆ ಗಳು ಭಾರತೀಯ ಸಮಾಜದ ಆತ್ಮಸಾಕ್ಷಿಯನ್ನು ಹೇಗೆ ಕೊಂದು ಹಾಕಿವೆ ಎಂಬುದನ್ನು ಮನಸ್ಸು ವಿಹ್ವಲಗೊಳ್ಳುವ ರೀತಿಯಲ್ಲಿ ಇಲ್ಲಿ ಚಿತ್ರಿಸಲಾಗಿದೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ನಡೆಸಿದ ಪ್ರಮುಖ ಕಾರ್ಯಕ್ರಮಗಳು

ಗಾಂಧೀ ವಿಚಾರ ಪ್ರಚಾರ

ಶಾಲಾ ಮಕ್ಕಳಿಗೆ ಕಾರ್ಯಕ್ರಮ

ದಿನಾಂಕ 11-11-2017 ರಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಮೈಸೂರು ವಿಶ್ವವಿದ್ಯಾಲಯ ಗಾಂಧೀ ಭವನ ಮತ್ತು ಮಹದೇಶ್ವರ ಪ್ರೌಢ ಶಾಲೆ, ಮಲೆ ಮಹದೇಶ್ವರ ಬೆಟ್ಟ ಇವರ ಸಂಯುಕ್ತ ಆಶ್ರಯದಲ್ಲಿ ಗಾಂಧೀ ವಿಚಾರ ಪ್ರಚಾರ ಕಾರ್ಯಕ್ರಮ ನಡೆಯಿತು. ಇದನ್ನು ಮಹದೇಶ್ವರ ಪ್ರೌಢಶಾಲೆ ಮಹದೇಶ್ವರ ಬೆಟ್ಟ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮನ್ನು ಡಾ. ಗಂಗೂಬಾಯಿ ಹಾನಗಲ್ ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸರ್ವಮಂಗಳ ಶಂಕರ್, ಗಾಂಧೀ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.

ಗಾಂಧೀ ಭವನದ ಸಹ ಕಾರ್ಯದರ್ಶಿ ಶ್ರೀ ಯೋಗೇಶ್ ಹೆಚ್. ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಎನ್. ಎನ್. ಪ್ರಹ್ಲಾದ್ ಅವರು 'ಗಾಂಧೀ ಪರಿಕಲ್ಪನೆಯಲ್ಲಿ ಮೌಲ್ಯ ಶಿಕ್ಷಣ' ಕುರಿತು ಉಪನ್ಯಾಸ ನೀಡಿದರು.

ಡಾ. ಎಸ್. ಶಿವರಾಜಪ್ಪ, ನಿರ್ದೇಶಕರು, ಗಾಂಧೀ ಭವನ, ಮೈಸೂರು ವಿಶ್ವವಿದ್ಯಾಲಯ ಇವರು 'ಗಾಂಧೀ ಪರಿಕಲ್ಪನೆಯಲ್ಲಿ ನೈರ್ಮಲ್ಯ ಮತ್ತು ಗಿರಿಜನೋದ್ದಾರ' ವಿಷಯ ಕುರಿತು ಉಪನ್ಯಾಸ ನೀಡಿದರು.

ಈ ಕಾರ್ಯಕ್ರಮದಲ್ಲಿ ಮಹದೇಶ್ವರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಗಾಂಧೀ ಭವನದೆಡೆಗೆ ವಿದ್ಯಾರ್ಥಿಗಳು

ದಿನಾಂಕ 14-11-2017 ರಂದು 'ಗಾಂಧೀ ಭವನದೆಡೆಗೆ ನಮ್ಮ ನಡಿಗೆ' ಕಾರ್ಯಕ್ರಮದ ಅಂಗವಾಗಿ ಗಾಂಧೀ ಭವನಕ್ಕೆ ಭೇಟಿ ನೀಡಿದ ವಿದ್ಯಾರ್ಥಿಗಳು ಗಾಂಧೀ ಭವನದಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ವಿದ್ಯಾರ್ಥಿಗಳಿಗೆ 'ಗಾಂಧೀ' ಕಿರುಚಿತ್ರ ಪ್ರದರ್ಶನ ಆಯೋಜಿಸಲಾಗಿತ್ತು. ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷರಾದ ಪ್ರೊ. ಜಿ.ಬಿ. ಶಿವರಾಜು ಅವರು ಗಾಂಧೀಜಿಯವರ ತತ್ವ ಸಿದ್ಧಾಂತಗಳ ಪರಿಚಯವನ್ನು ಸರಳ ಮಾತುಗಳಲ್ಲಿ ವಿದ್ಯಾರ್ಥಿಗಳಿಗೆ ಮಾಡಿಕೊಟ್ಟರು.

ಬಾ ಮತ್ತು ಬಾಪು-150ನೇ ಜನ್ಮ ಶತಮಾನೋತ್ಸವ

ಮಹಾತ್ಮ ಗಾಂಧೀ ಹಾಗೂ ಕಸ್ತೂರ ಬಾ ಅವರ 150ನೇ ಜನ್ಮ ದಿನೋತ್ಸವವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುವುದನ್ನು ಚರ್ಚಿಸಲು ಅಖಿಲ ಭಾರತ ಸರ್ವ ಸೇವಾ ಸಂಘದ ಪದಾಧಿಕಾರಿಗಳಾದ ಜಿವಿಎಸ್ ಪ್ರಸಾದ್, ವಾರ್ಧಾ ಆಶ್ರಮದ ಶ್ರೀ ಮಟ್ಕಾರ್ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಇತರೆ ಗಾಂಧೀ ಸಂಸ್ಥೆಗಳಲ್ಲಿ ಸಕ್ರಿಯರಾಗಿರುವ ಸುಶ್ರೀ ರಾಧಾ ಭಟ್ ಅವರು ಗಾಂಧಿ ಸ್ಮಾರಕ ನಿಧಿಗೆ ಆಗಮಿಸಿದ್ದರು.

ಬಾ-ಬಾಪು 150ನೇ ಜನ್ಮ ದಿನೋತ್ಸವದ ರೂಪುರೇಷೆಗಳ ಬಗೆಗೆ ಕರ್ನಾಟಕದ ಗಾಂಧೀ ಪರಿವಾರ ಸಂಸ್ಥೆಗಳು ಕರ್ನಾಟಕದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳ ಬಗೆಗೆ ಅವರು ಮಾಹಿತಿ ಪಡೆದರು. ಅವರು ನೀಡಿದ ಕೆಲವು ಸಲಹೆಗಳನ್ನೂ ಪರಿಶೀಲನೆಗೆ ಸ್ವೀಕರಿಸಲಾಯಿತು.

ಈ ಸಭೆಯಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ; ವೂಡೆ ಪಿ. ಕೃಷ್ಣ, ಉಪಾಧ್ಯಕ್ಷರಾದ ಪ್ರೊ. ಜಿ.ಬಿ. ಶಿವರಾಜು ಕಾರ್ಯದರ್ಶಿ ಶ್ರೀ ಈ. ಬಸವರಾಜು, ಸಹಕಾರ್ಯದರ್ಶಿ ಶ್ರೀ ಮಂಗ್ಳೂರ ವಿಜಯ, ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾದ ಶ್ರೀ ಲ.ನರಸಿಂಹಯ್ಯ ಮತ್ತು ಇತರ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸ್ವಚ್ಛ ಭಾರತ ಅಭಿಯಾನ್

ದಿನಾಂಕ 28-11-2017ರಂದು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಫಿಲ್ಮ್ಸ್ ಡಿವಿಷನ್ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಗಾಂಧೀ ಭವನದಲ್ಲಿ 'ಸ್ವಚ್ಛ ಭಾರತ ಅಭಿಯಾನ್' ಕುರಿತು ಕಿರುಚಲನ ಚಿತ್ರೋತ್ಸವವನ್ನು ಮಕ್ಕಳಿಗಾಗಿ ಮತ್ತು ಯುವಜನರಿಗಾಗಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ಗಾಂಧೀಜಿಯವರ ಎರಡು ಮುಖ್ಯ ಕಾರ್ಯಗಳಾದ ಸಂಸದೀಯ ಕಾರ್ಯಗಳು ಹಾಗೂ ರಚನಾತ್ಮಕ ಕಾರ್ಯಗಳ ಬಗೆಗೆ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕರ್ನಾಟಕ ರಾಜ್ಯ ವಿಭಾಗದ ಡೆಪ್ಯೂಟಿ ಡೈರೆಕ್ಟರ್ ಜನರಲ್ ಶ್ರೀ ವಿ. ಎಸ್. ನಾಗರಾಜನ್ ಮತ್ತು ರಾಜ್ಯ ಎನ್. ಎಸ್.ಎಸ್ ಅಧಿಕಾರಿ ಡಾ. ಗಣನಾಥ ಶೆಟ್ಟಿ ಎಕ್ಕಾರು ಮುಖ್ಯ ಅತಿಥಿಗಳಾಗಿದ್ದರು.

ಗಾಂಧಿ ಸ್ಮಾರಕ ನಿಧಿಯ ಸಹ ಕಾರ್ಯದರ್ಶಿ ಮಂಗ್ಳೂರ ವಿಜಯ ಸ್ವಾಗತಿಸಿದರು; ಮತ್ತೊರ್ವ ಸಹ ಕಾರ್ಯದರ್ಶಿ ಯೋಗೇಶ್ ಹೆಚ್. ಕಾರ್ಯಕ್ರಮದಲ್ಲಿ ಫಿಲ್ಮ್ಸ್ ಡಿವಿಷನ್ ಅಧಿಕಾರಿಗಳೊಂದಿಗೆ ಉಪಸ್ಥಿತರಿದ್ದರು.

ಸ್ವಚ್ಛ ಭಾರತ ಅಭಿಯಾನದ ಉದ್ದೇಶವನ್ನು ಮನವರಿಕೆ ಮಾಡಿಕೊಡುವ 17ಕ್ಕೂ ಹೆಚ್ಚು ಕಿರು ಚಲನಚಿತ್ರಗಳನ್ನು ವಿಧ್ಯಾರ್ಥಿಗಳು ವೀಕ್ಷಿಸಿದರು.

ತುಮಕೂರು ಜಿಲ್ಲೆ ಕುಣಿಗಲ್‌ನಲ್ಲಿ ಯುವಜನೋತ್ಸವ

ತುಮಕೂರು ಜಿಲ್ಲೆಯ ಕುಣಿಗಲ್‌ನ ಮಹಾತ್ಮಾ ಗಾಂಧಿ ಸರ್ಕಾರಿ ಪ.ಪೂ.ಕಾಲೇಜು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಶ್ರೀ ದೈತಮಾರಮ್ಮ ಚಾರಿಟೆಬಲ್ ಟ್ರಸ್ಟರ(ರಿ) ಕಾಡಶೆಟ್ಟಿಹಳ್ಳಿ ಆಶ್ರಯದಲ್ಲಿ 2018ರ ಜನವರಿ 3–5ರಂದು 'ಯುವಜನೋತ್ಸವ' ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿತ್ತು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಶ್ರೀಮತಿ ಇಂದಿರಾ ಅವರು ಪ್ರಥಮ ದಿನ ಧ್ವಜಾರೋಹಣ ಮಾಡಿದರು. ಶ್ರೀ ಗಣನಾಥ ಶೆಟ್ಟಿ ಎಕ್ಕಾರು ಅವರು 'ವ್ಯಕ್ತಿತ್ವ ವಿಕಸನದಲ್ಲಿ ಎನ್.ಎಸ್.ಎಸ್.ಪಾತ್ರ' ವಿಷಯ ಕುರಿತು ಉಪನ್ಯಾಸ ನೀಡಿದರು.

ಎರಡನೇ ದಿನ 'ಛಾಯಾಗ್ರಹಣ ಕೌಶಲ್ಯ' ವಿಷಯ ಕುರಿತು ಶ್ರೀ ದಿನೇಶ್ ಕುಮಾರ್ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು.

ಕಡೇ ದಿನ ಸಮಾರೋಪ ಭಾಷಣವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ॥ ವೂಡೇ ಪಿ.ಕೃಷ್ಣ ಅವರು ಮಾಡಿದರು.

ಗಮನಾರ್ಹ ಸುದ್ದಿಗಳು

'ಮಂಡ್ಯದ ಗಾಂಧಿ' ನೀಡಿದ ಕೊಡುಗೆ

'ಮಂಡ್ಯದ ಗಾಂಧಿ' ಎಂದೇ ಹೆಸರಾಗಿರುವ ಮಾಜಿ ಸಂಸದ ಶ್ರೀ ಜಿ. ಮಾದೇಗೌಡರು ತಮಗೆ ದೊರೆತ 'ಸಂಗೊಳ್ಳಿ ರಾಯಣ್ಣ ಪ್ರಶಸ್ತಿ'ಯ ಮೊತ್ತ ರೂ.5ಲಕ್ಷ ಗಳನ್ನು ಜಿಲ್ಲೆಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 'ಗಾಂಧಿ ಗ್ರಾಮ' ಖಾತೆಗೆ ಕೊಡುಗೆಯಾಗಿ ನೀಡಿದ್ದಾರೆ.

ಮಹಾತ್ಮಾ ಗಾಂಧಿ ಸ್ಮಾರಕ ಟ್ರಸ್ಟ್ ಮಂಡ್ಯ ತಾಲ್ಲೂಕು ಎಚ್.ಮಲ್ಲಿಗೆರೆ ಬಳಿ 'ಗಾಂಧಿ ಗ್ರಾಮ'ವನ್ನು ನಿರ್ಮಿಸಲಿದೆ.

ಹಿರಿಯ ಹೋರಾಟಗಾರರಾದ ಶ್ರೀ ಜಿ. ಮಾದೇಗೌಡರು ಈ ಹಿಂದೆ ತಮಗೆ ದೊರೆತಿದ್ದ ಚುಂಚಶ್ರೀ ಪ್ರಶಸ್ತಿಯ ಮೊತ್ತ ರೂ. 50,000/– ಕನ್ನಡ ಸಹಿತ್ಯ ಪರಿಷತ್ತಿನ ಗಾಂಧಿ ಪುರಸ್ಕಾರದ ಮೊತ್ತ ರೂ.10,000/– ಮತ್ತು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ 35 ವರ್ಷಗಳಿಗೂ ಹೆಚ್ಚಿನ ಕಾಲ ಅಮೋಘ ಸೇವೆ ಸಲ್ಲಿಸಿದ ಡಾ॥ ಹೊ. ಶ್ರೀನಿವಾಸಯ್ಯ ಪ್ರಶಸ್ತಿಯ ಮೊತ್ತ ರೂ. 10,000/–ಗಳನ್ನು ಮಂಡ್ಯ ಗಾಂಧೀ ಭವನಕ್ಕೆ ನೀಡಿದ್ದರು.

ಗಾಂಧೀಜಿಯೇ ಸ್ಫೂರ್ತಿ –ದಲಾಯ್ ಲಾಮಾ

ನೊಬೆಲ್ ಪುರಸ್ಕೃತ ದಲಾಯ್ ಲಾಮಾ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಗಾಂಧೀಜಿಯನ್ನು ನೆನಪಿಸಿಕೊಂಡು, ಅವರ ತತ್ವಗಳನ್ನು ತಮ್ಮ ಮಾತುಗಳಲ್ಲಿ ಯಥೇಚ್ಛವಾಗಿ ಉದಾಹರಿಸಿದರು.

ಇಂದು ಧಾರ್ಮಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುವ ತುರ್ತು ಇದೆ. ಭಾರತದ ಪುರಾತನ ಜ್ಞಾನವು ವಿಜ್ಞಾನ ಮತ್ತು ತಂತ್ರಜ್ಞಾನದ ಸಮ್ಮಿಲನ. ಭಾರತದಲ್ಲಿ ಸಾವಿರಾರು ವರ್ಷಗಳಿಂದ ವಿವಿಧ ಧರ್ಮ ಮತ್ತು ಆಚರಣೆಗಳು ನಡೆದುಕೊಂಡು ಬಂದಿವೆ. ಧರ್ಮದ ಹೆಸರಿನಲ್ಲಿ ಸಂಘರ್ಷಕ್ಕೆ ಇಳಿಯುವ ಅನೇಕ ರಾಷ್ಟ್ರಗಳನ್ನು ಇಂದು ಕಾಣುತ್ತಿದ್ದೇವೆ. ಆದರೆ, ಭಾರತವು ಸಂಪೂರ್ಣ ಸಾಮರಸ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಮುಂಚೂಣಿಯಲ್ಲಿ ಇರುವುದು ಅತ್ಯವಶ್ಯ.

ಸಹಿಷ್ಣುತೆ ಮತ್ತು ನಿಸ್ವಾರ್ಥ ಜನಸೇವೆ ಇಂದು ಅತಿ ಮುಖ್ಯ. ಪರಸ್ಪರರಲ್ಲಿ ಪ್ರೀತಿಯನ್ನು ವಿಶ್ವಾಸವನ್ನು ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸಬೇಕು. ಇದಕ್ಕೆ ಮಹಾತ್ಮಾ ಗಾಂಧೀಜಿಯವರೇ ನಮಗೆ ಸ್ಫೂರ್ತಿ; ಅವರು ತಿಳಿಸಿದ ಸತ್ಯ ಮತ್ತು ಅಹಿಂಸೆ ತತ್ವಗಳನ್ನು ನಾವು ವೈಯಕ್ತಿಕ, ಸಾರ್ವಜನಿಕ ಮತ್ತು ರಾಷ್ಟ್ರೀಯ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ದಲಾಯ್ ಲಾಮಾ ಅವರು ತಿಳಿಸಿದರು.

ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ಬೆಳ್ಳಿಹಬ್ಬ ಪ್ರಯುಕ್ತ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ' ವಿಷಯ ಕುರಿತು ಉಪನ್ಯಾಸ ನೀಡಿದರು.

ಗಾಂಧೀಜಿ ಬದುಕಿನಿಂದ ನಮಗೆ ಪಾಠ

ಗಾಂಧೀಜಿ ತಮ್ಮ ಜೀವನದಲ್ಲಿ ಎದುರಿಸಿದ ಸಂದರ್ಭಗಳಿಂದಲೇ ತಮ್ಮ ಜೀವನದಲ್ಲಿ ಪರಿವರ್ತನೆಯನ್ನು ತಂದುಕೊಂಡವರು.

ಒಮ್ಮೆ ಚೆನ್ನೈನಿಂದ ಮದುರೈಗೆ ಅವರು ರೈಲು ಪ್ರಯಾಣ ಕೈಗೊಂಡಿದ್ದರು. ಇಡೀ ಬೋಗಿ ಜನರಿಂದ ತುಂಬಿ ಹೋಗಿತ್ತು. ಹಾಗಿದ್ದರೂ, ಅವರು ಸಹಪ್ರಯಾಣಿಕರ ಜೊತೆಗೆ ಮಾತನಾಡಲು ಬಯಸಿದರು. ಅಲ್ಲಿನ ಜನರಿಗೆ ಖಾದಿ ಬಟ್ಟೆ ಕುರಿತು ಹೇಳಿದರು.

ಮಾರನೇ ದಿನ ಅವರು ತಮ್ಮ ಜೀವನಕ್ಕೆ ಸಂಬಂಧಿಸಿ ಮೊದಲು ಮುಖ್ಯವಾದ ತೀರ್ಮಾನ ಕೈಗೊಂಡರು. ಗಾಂಧಿ ತಮ್ಮ ಜೀವನದಲ್ಲಿ 22 ಸೆಪ್ಟೆಂಬರ್ 1921ರಂದು ಮುಖ್ಯವಾದ ತೀರ್ಮಾನ ಕೈಗೊಂಡರು. ತಲೆಗೊಂದು ದೊಡ್ಡ ರುಮಾಲು ಮತ್ತು ಮೈತುಂಬಾ ಬಟ್ಟೆ ಧರಿಸುತ್ತಿದ್ದ ಅವರು, ಆ ದಿನದಿಂದ ತುಂಡು ಪಂಚೆ ಮತ್ತು ಮೈಮೇಲೊಂದು ಶಾಲು ಧರಿಸಲು ಪ್ರಾರಂಭಿಸಿದರು. ಭಾರತದ ಬಡಜನರ ಪರವಾಗಿ, ಅವರಲ್ಲಿ ಒಬ್ಬರಾಗಿ ಕೆಲಸ ಮಾಡಲು ನಿರ್ಧರಿಸಿದ್ದ ಅವರು, ಭಾರತೀಯ ಜನಸಾಮಾನ್ಯರನ್ನು ಪ್ರತಿನಿಧಿಸುವಂಥ ಉಡುಪೇ ತಮ್ಮದಾಗಬೇಕು ಎಂಬ ಚಾರಿತ್ರಿಕ ನಿರ್ಣಯ ಕೈಗೊಂಡಿದ್ದು ಆಗಲೇ.

ಅವರು ತಮ್ಮ ಗುಜರಾತಿ ಉಡುಪನ್ನು ಕೈಬಿಟ್ಟು, ಒಂದು ಚಿಕ್ಕ ಪಂಚೆ ಉಡಲು ಮತ್ತು ಇನ್ನೊಂದು ಚಿಕ್ಕ ಪಂಚೆ ಹೊದೆಯಲು ಬಳಸಿದರು. ಮದುರೈನ ಪಶ್ಚಿಮ ಮಾಸಿ ಬೀದಿಯ ಮನೆ ನಂಬರ್ 251ರಿಂದ ಅವರು ಈ ಹೊಸ ಉಡುಪು ಧರಿಸಿ ಹೊರಬಿದ್ದಾಗ, ಇಡೀ ಮದುರೈ ಪಟ್ಟಣದ ತುಂಬಾ ಸುದ್ದಿಯೇ ಸುದ್ದಿ. (ಈ ಮನೆ ಈಗ ಖಾದಿ ಎಂಪೋರಿಯಂ ಆಗಿದೆ)

'ನನ್ನ ಜೀವನದಲ್ಲಿ ಅನೇಕ ನಿರ್ಧಾರಗಳನ್ನು ನಾನು ಧೃಡವಾಗಿ ಕೈಗೊಂಡಿದ್ದೇನೆ. ಪ್ರತಿಯೊಂದು ನಿರ್ಧಾರದ ಹಿಂದೆ ದೀರ್ಘ ಆಲೋಚನೆ. ಉಡುಪಿಗೆ ಸಂಬಂಧಿಸಿ ನಾನು ಮದುರೈನಲ್ಲಿ ತೆಗೆದುಕೊಂಡಿದ್ದೂ ಅಂಥದ್ದೇ. ನನ್ನ ಯಾವ ನಿರ್ಧಾರಗಳ ಬಗ್ಗೆಯೂ ನನಗೆ ವಿಷಾದ, ವ್ಯಥೆ ಆಗಿಲ್ಲ' ಎಂದು ಗಾಂಧೀಜಿ ಹೇಳಿದ್ದಾರೆ.

ಮುಂದೆ 'ನವಜೀವನ' ಪತ್ರಿಕೆಯಲ್ಲಿ ಗಾಂಧೀಜಿ "ನನ್ನನ್ನು ಯಾರೂ ಕುರುಡಾಗಿ ಅನುಕರಿಸುವ ಅವಶ್ಯಕತೆ ಇಲ್ಲ. ವಿದೇಶಿ ಬಟ್ಟೆಗಳ ವಿರೋಧಿ ಚಿಂತನೆ ಮತ್ತು ಸರಳ ಉಡುಪು ಮತ್ತು ಜೀವನ ಕುರಿತು ಎಲ್ಲರೂ ಆಲೋಚಿಸಬೇಕು; ಉತ್ತಮ ನಿರ್ಣಯ ಕೈಗೊಳ್ಳಬೇಕು' ಎಂದಷ್ಟೇ ನಾನು ಹೇಳಬಯಸುವೆ" ಎಂದು ಬರೆದರು. ■

BOOKS DONATED TO STUDENTS

College NSS Unit distributed books titled "Gandhiji's messages to children" to Sindhi High School students at Hebbal and KK Road campuses on 02/01/18. Principal Dr. B.S. Srikanta addressing the students urged the young ones to follow the path of Mahathma Gandhi. The motivational talk on the life and contributions of Mahatma Gandhi culminated in seeding patriotism among the students. 450 books containing 84 thoughts for children, of both kannada and Englishversions were distributed, sponsored by Gandhi Smaraka Nidhi, Bengaluru and published by Information and Public Relations Dept., Govt of Karnataka.

Principal was accompanied by Vice Principals Dr. S. Anil Kumar and Prof. N. Asha, and NSS programme Officer Prof. M.A. Vaideysh and Members Sri Devaraju S., Prof. Kariyanna S., Prof. Nandini S., and Sri Srinivas.



School principals extended fullest co-operation for this initiative and appealed the students to read and explain one thought a day during the assembly.

Dr. B.S. Srikanta,invited the principals, staff and students of both the schools to Gandhi Bhavan and also assured to make necessary arrangementsin case they are willing to avail this opportunity. ■

ಗಾಂಧೀ ಅಧ್ಯಯನ ಶಿಬಿರ ಜೊತೆಗೆ ವಿಶೇಷ ವಾರ್ಷಿಕ ಶಿಬಿರ



ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಮತ್ತು ಶ್ರೀ ಕೃಷ್ಣ ಪದವಿ ಕಾಲೇಜು ಜಂಟಿಯಾಗಿ ವಲ್ಲಭ ನಿಕೇತನ ಆಶ್ರಮದಲ್ಲಿ ನಡೆಸಿದ 'ಗಾಂಧೀ ಅಧ್ಯಯನ ಶಿಬಿರದೊಂದಿಗೆ ವಿಶೇಷ ವಾರ್ಷಿಕ ಶಿಬಿರ' ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ವಿಶ್ವನೀಡಂ ಟ್ರಸ್ಟ್ ಸಹಕಾರ ನೀಡಿದ್ದವು. ಶಿಬಿರದ ಧ್ಯೇಯವನ್ನಾಗಿ 'ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವಜನತೆ' ಎಂಬುದನ್ನು ನಿಗದಿಪಡಿಸಿಕೊಳ್ಳಲಾಗಿತ್ತು.

17 ಜನೆವರಿ 2018ರಂದು ಶಿಬಿರದ ಪ್ರಾರಂಭದಲ್ಲಿ ಶ್ರೀಮತಿ ಸುನೀತಾ ಪ್ರಸಾದ್ ಸುಗಮ ಸಂಗೀತ ಮತ್ತು ನಾಡಗೀತೆಯನ್ನು ಹಾಡಿದರು. ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೃಷ್ಣ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ॥ ಎಂ.ರುಕ್ಮಾಂಗದ ನಾಯ್ಡು ವಹಿಸಿದ್ದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ॥ ವೂಡೇ ಪಿ. ಕೃಷ್ಣ, ವಿಶ್ವನೀಡಂ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಸವಿತಾ ಭಟ್, ಕಾರ್ಯದರ್ಶಿ ಸಿದ್ಧಾರ್ಥ ಶರ್ಮಾ, ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಡಾ॥ ಆರ್. ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಭಾಗಿಯಾಗಿದ್ದರು. ವಿವಿಧ ಗೋಷ್ಠಿಗಳ ಅಧ್ಯಕ್ಷತೆಯನ್ನು ಶ್ರೀ ಕೃಷ್ಣ ಕಾಲೇಜಿನ ಬೋಧಕರು ವಹಿಸಿಕೊಂಡಿದ್ದರು.

ಆರೋಗ್ಯ ಮತ್ತು ಜೀವನ ಶಿಕ್ಷಣ, ಮಕ್ಕಳ ಹಕ್ಕುಗಳು, ವಿಷಯ ಕುರಿತ ಗೋಷ್ಠಿಯಲ್ಲಿ ಡಾ॥ ಪ್ರದೀಪ್, ಪ್ರಾಧ್ಯಾಪಕರು ನಿಮ್ಹಾನ್ಸ್, ಬೆಂಗಳೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ, ವಿಷಯದ ಮಹತ್ವವನ್ನು ಮನಗಾಣಿಸಿಕೊಟ್ಟರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ॥ ಶೈಲಜಾ, ಮುಖ್ಯಸ್ಥರು, ಹಿಂದಿ ವಿಭಾಗ, ಇವರು ವಹಿಸಿದ್ದರು.

ಅಂದು ಸಂಜೆ 'ಸಾಂಸ್ಕೃತಿಕ ಕಾರ್ಯಕ್ರಮ'ದಲ್ಲಿ ಕೆ. ಸುಚೇಂದ್ರ ಪ್ರಸಾದ್ ನಿರ್ದೇಶಿಸಿದ ಮಕ್ಕಳ ಹಕ್ಕುಗಳ ಕುರಿತಾದ ಚಲನಚಿತ್ರ 'ಸಂದಿಗ್ಧ'ವನ್ನು ಪ್ರದರ್ಶಿಸಲಾಯಿತು. ಇದನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾಯೋಜಿಸಿತ್ತು.

19ರಂದು ಉರಗ ತಜ್ಞರಾದ ಗುರುರಾಜ ಸನಿಲ್ ಅವರು 'ಪರಿಸರ ಸ್ನೇಹಿ ಹಾವು' ವಿಷಯ ಕುರಿತು ಮಾತನಾಡಿದರು. ಹಾವುಗಳು ಹೇಗೆ ಪರಿಸರ ಸ್ನೇಹಿಯಾಗಿದೆ ಎಂಬುದನ್ನು ಮನಕ್ಕೆ ನಾಟುವ ಹಾಗೆ ತಿಳಿಸಿ ಕೊಟ್ಟದ್ದು ಎಲ್ಲಾ ವಿದ್ಯಾರ್ಥಿಗಳಿಗೆ ಇಷ್ಟವಾಯಿತು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ॥ ಉಷಾ ಕುಮಾರಿ, ಮುಖ್ಯಸ್ಥರು, ಕನ್ನಡ ವಿಭಾಗ, ಇವರು ವಹಿಸಿದ್ದರು.

ಸಂಜೆ ನಡೆದ 'ಪರಿಸರ ಮನನ-ಪ್ರಾತ್ಯಕ್ಷಿಕೆ' ಕಾರ್ಯಕ್ರಮದಲ್ಲಿ ಪರಿಸರ ತಜ್ಞರಾದ ಈಶ್ವರ ಪ್ರಸಾದ್ ಭಾಗಿಯಾಗಿದ್ದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಅನಿಲ್ ಕುಮಾರ್, ಕನ್ನಡ ಉಪನ್ಯಾಸಕರು ಇವರು ವಹಿಸಿದ್ದರು.

20ರಂದು 'ಸ್ವ ಅರಿವು-ನಮ್ಮ ಬೆಳವಣಿಗೆ' ಎಂಬುದು ತರಬೇತಿಯ ವಿಷಯವಾಗಿತ್ತು. ಬೆಂಗಳೂರಿನ ಸರ್ಕಾರೇತರ ಸಂಸ್ಥೆಯಾದ 'ದಿಶಾ' ತಂಡದವರು ತರಬೇತಿಯನ್ನು ನೀಡಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ವಿಶ್ವನೀಡಂ ಟ್ರಸ್ಟೀ ಎಂ.ಸಿ.ನರೇಂದ್ರ ಇವರು ವಹಿಸಿಕೊಂಡಿದ್ದರು. ಮುಖ್ಯಅತಿಥಿಯಾಗಿ ಎನ್.ಎಸ್. ಎಸ್. ಕಾರ್ಯಕ್ರಮ ಅಧಿಕಾರಿ ಡಾ। ಪೂರ್ಣಿಮಾ ಜೋಗಿ ಇವರು ಭಾಗ ವಹಿಸಿದ್ದರು.

21ರಂದು ಗಾಂಧೀವಾದಿ ಇ.ಪಿ.ಮೆನನ್ ಅವರು 'ಗಾಂಧೀ ತತ್ವದ ಪ್ರಸ್ತುತತೆ' ಕುರಿತು ಸಮಗ್ರವಾಗಿ ಅರಿವು ನೀಡಿದರು. ವಿ.ಎನ್.ತಿಪ್ಪನಗೌಡ, ಉಪಾಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ ಇವರು ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಗೌರವಾನ್ವಿತ ಅತಿಥಿಯಾಗಿ ವಿಧಾನ ಪರಿಷತ್ ಸಭಾಪತಿ ಶ್ರೀ ಡಿ.ಎಚ್. ಶಂಕರ ಮೂರ್ತಿ, ಗಾಂಧೀ ಸೇವಾ ಪ್ರಶಸ್ತಿ ಪುರಸ್ಕೃತೆ ಸುಶ್ರೀ ಚನ್ನಮ್ಮ ಹಳ್ಳಿಕೇರಿ ಭಾಗಿಯಾದರು. ಮುಖ್ಯ ಅತಿಥಿಯಾಗಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಪಾಲ್ಗೊಂಡಿದ್ದರು.

ಸಮಾರೋಪ ಭಾಷಣವನ್ನು ಎನ್.ಎಸ್.ಎಸ್. ರಾಜ್ಯ ಸಂಪರ್ಕಾಧಿಕಾರಿ ಡಾ॥ ಗಣನಾಥ ಶೆಟ್ಟಿ ಎಕ್ಕಾರು ಅವರು ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೃಷ್ಣ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ॥ ರುಕ್ಮಾಂಗದ ನಾಯ್ಡು ವಹಿಸಿದ್ದರು.

ಏಳು ದಿನಗಳ ಶಿಬಿರದಲ್ಲಿ ವಿದ್ಯಾರ್ಥಿಗಳು ವಲ್ಲಭ ನಿಕೇತನ ಆಶ್ರಮದ ವಠಾರವನ್ನು ಸ್ವಚ್ಛಗೊಳಿಸಿದರು; ಉದ್ಯಾನವನವನ್ನು ನಿರ್ಮಾಣ ಮಾಡಿದರು; ಪರಿಸರ ಕುರಿತ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು. ವಿವೇಕಾನಂದ ಮತ್ತು ಗಾಂಧೀಜಿ ತತ್ವಗಳನ್ನು ಮತ್ತು ರೂಪಿಸಿ ಕೊಳ್ಳಬೇಕಾದ ಜೀವನ ಮೌಲ್ಯಗಳನ್ನು ಅರಿತರು.

'ವಿವೇಕಾನಂದ ತತ್ವ ಅರಿವು' ಕುರಿತು

ರಾಜ್ಯ ಮಟ್ಟದ ಅಧ್ಯಯನ ಶಿಬಿರ

ಇದೇ ಕಾರ್ಯಕ್ರಮದ ಭಾಗವಾಗಿ, ಜನವರಿ 18ರಂದು ಯುವ ಸಪ್ತಾಹದ ಅಂಗವಾಗಿ 'ವಿವೇಕಾನಂದ ತತ್ವ ಅರಿವು' ವಿಷಯ ಕುರಿತು ರಾಜ್ಯ ಮಟ್ಟದ ಅಧ್ಯಯನ ಶಿಬಿರ ನಡೆಯಿತು. ಖ್ಯಾತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮತ್ತು ಚರ್ಚೆ ನಡೆಯಿತು.

ಅಧ್ಯಕ್ಷತೆಯನ್ನು ಕ.ಗಾಂ. ಸ್ಮಾ.ನಿಧಿ ಅಧ್ಯಕ್ಷರಾದ ಡಾ॥ ವೂಡೇ ಪಿ.ಕೃಷ್ಣ ವಹಿಸಿದ್ದರು. ಮಾತಾ ವಿವೇಕಮಯಿ, ಅಧ್ಯಕ್ಷರು, ಭವತಾರಿಣಿ ಆಶ್ರಮ ಇವರು ಪ್ರವಚನ ನೀಡಿದರು; ಡಾ॥ ರುಕ್ಮಾಂಗದ ನಾಯ್ಡು, ಅಧ್ಯಕ್ಷರು, ಶ್ರೀ ಕೃಷ್ಣ ಸಮೂಹ ಸಂಸ್ಥೆಗಳು ಇವರು ಮುಖ್ಯ ಅತಿಥಿ ಯಾಗಿದ್ದರು. ಡಾ॥ ಗಣನಾಥಶೆಟ್ಟಿ ಎಕ್ಕಾರು, ಎನ್.ಎಸ್.ಎಸ್. ರಾಜ್ಯ ಸಂಪರ್ಕಾಧಿಕಾರಿ ಇವರು ಪ್ರಾಸ್ತಾವಿಕ ಭಾಷಣ ಮಾಡಿದರು.



ನಂತರ ನಡೆದ ವಿಚಾರ ಗೋಷ್ಠಿಯಲ್ಲಿ ಉಡುಪಿ ಸರ್ಕಾರಿ ಕಾಲೇಜಿನ ಸ್ನಾತಕೋತ್ತರ ಆಂಗ್ಲಭಾಷಾ ವಿಭಾಗದ ಮುಖ್ಯಸ್ಥರಾದ ಪ್ರೊ॥ ಪ್ರಸಾದ್ ರಾವ್ ಅವರು ಉಪನ್ಯಾಸ ನೀಡಿದರು.

ಸಮಾರೋಪ ಭಾಷಣವನ್ನು ಡಾ॥ ವೂಡೇ ಪಿ.ಕೃಷ್ಣ ಮಾಡಿದರು. ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಅವರು ಮಾತನಾಡುತ್ತಾ 'ಮಾನವರು ಸಮಾಜಮುಖಿ ಜೀವನವನ್ನು ಅನುಭಾವಿಸಿಕೊಂಡು, ವಿಶ್ವಪಥದಲ್ಲಿ ಸಹಮಾನವರೊಂದಿಗೆ ಸಹಜೀವನ ನಡೆಸುವಂಥವರಾಗಬೇಕಿದೆ' ಎಂದರು. ಉಪನ್ಯಾಸಕಿ ವೀಣಾ ನಾಗರಾಜ್ ಮುಖ್ಯ ಅತಿಥಿಯಾಗಿದ್ದರು. ಕಾರ್ಯಕ್ರಮ ದಲ್ಲಿ ಕ.ಗಾಂ.ಸ್ಮಾ.ನಿಧಿ ಗೌ॥ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ರಾ.ಸೇ.ಯೋ. ಸಂಯೋಜನಾಧಿಕಾರಿ ಡಾ॥ ಶ್ರೀನಿವಾಸ್ ಉಪಸ್ಥಿತರಿದ್ದರು.

47ನೇ ಅಖಿಲ ಭಾರತೀಯ ಸರ್ವೋದಯ ಸಮ್ಮೇಳನ



ನಲವತ್ತೇಳನೇ ಅಖಿಲ ಭಾರತೀಯ ಸರ್ವೋದಯ ಸಮ್ಮೇಳನವು ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯ ಸೇವಾಗ್ರಾಮದಲ್ಲಿ ನಡೆಯಿತು. ಇದರಲ್ಲಿ ಕರ್ನಾಟಕದಿಂದ 100 ವಿದ್ಯಾರ್ಥಿ–ವಿದ್ಯಾರ್ಥಿನಿಯರ ತಂಡವು ಭಾಗಿಯಾಗಿತ್ತು. ತಂಡದ ನೇತೃತ್ವವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸಹಯೋಗಿ ಅಬೀದಾ ಬೇಗಂ ವಹಿಸಿದ್ದರು. ಫೆಬ್ರುವರಿ 18ರಂದು ಸಂಜೆ ಈ ತಂಡವನ್ನು ಬೀಳ್ಕೊಡಲು ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ನಾಡಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ ವಿಜೇತರಾದ ಚೆನ್ನಮ್ಮ ಹಳ್ಳಿಕೇರಿ ಮತ್ತು ಗಾಂಧೀ ಭವನದ ಸದಸ್ಯರಾದ ಶ್ರೀ ಎಂ.ಸಿ.ನರೇಂದ್ರ ಅವರು ಪಾಲ್ಗೊಂಡಿದ್ದರು. ಸಮ್ಮೇಳನದಲ್ಲಿ ಭಾಗವಹಿಸಲು ತೆರಳಲಿದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆಖಾದಿ ಟೋಪಿ ಮತ್ತು ಖಾದಿ ಬ್ಯಾಗ್‌ಗಳನ್ನು ವಿತರಿಸಲಾಯಿತು. ಜೊತೆಗೆ, (1) ನಮ್ಮ ಮಂತ್ರ–ಜೈ ಜಗತ್ (2) ನಮ್ಮ ತಂತ್ರ ಗ್ರಾಮ ಸ್ವರಾಜ್ (3) ನಮ್ಮ ಗುರಿ ವಿಶ್ವಶಾಂತಿ ಎಂಬ ಸಂದೇಶವನ್ನು ಅವರಿಗೆ ನೀಡಲಾಯಿತು.

ಮಾರನೇ ದಿನ ಸಂಘಮಿತ್ರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನಲ್ಲಿ ತೆರಳಿದ ಈ ತಂಡವು, ನಾಲ್ಕು ರಾಜ್ಯಗಳನ್ನು ದಾಟಿ, 20ರಂದು ಸೇವಾಗ್ರಾಮದ ಬಾಪು ಕುಟೀರ ತಲುಪಿತು. ಅಲ್ಲಿ ಅವರನ್ನು ಸರ್ವೋದಯ ಕಾರ್ಯಕರ್ತರಾದ ಸಾರಂಗ ಭಾಯಿ ತಂಡವನ್ನು ಸ್ವಾಗತಿಸಿ, ಎಲ್ಲರಿಗೂ ಅಲ್ಲಿನ ಸೌಲಭ್ಯಗಳನ್ನು ಕುರಿತು ಮಾಹಿತಿ ನೀಡಿದರು.

ಅಂದು ಪ್ರಾರಂಭವಾದ 47ನೇ ಅಖಿಲ ಭಾರತ ಸರ್ವೋದಯ ಸಮ್ಮೇಳನದಲ್ಲಿ ದೇಶದ ಮೂಲೆ ಮೂಲೆಗಳಿಂದ ಹಿರಿಯ ಗಾಂಧೀವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು, ಸ್ವಯಂಸೇವಕರು, ವಿದ್ಯಾರ್ಥಿ–ಯುವಜನರು, ಅಧ್ಯಾಪಕರು ಬಂದಿದ್ದರು. ಅಡುಗೆ ಮನೆ ಹೊಣೆಗಾರಿಕೆ, ಸ್ವಚ್ಛತೆ–ವೇದಿಕೆ–ಭೋಜನ ಪೂರೈಕೆ ಮುಂತಾದ ಎಲ್ಲಾ ಕಾರ್ಯಗಳನ್ನೂ ಸ್ವಯಂಸೇವಕರು

ಸರ್ವೋದಯ ಸಮ್ಮೇಳನಕ್ಕೆ ಬೆಂಗಳೂರಿನಿಂದ ಇನ್ನೊಂದು ತಂಡ



ಸರ್ವೋದಯ ಸಮ್ಮೇಳನಕ್ಕೆ ಬೆಂಗಳೂರಿನಿಂದ ಇನ್ನೊಂದು ತಂಡವು ರಾಷ್ಟ್ರೀಯ ಸೇವಾ ಯೋಜನೆಯ ಡಾ॥ ವಿ.ಪ್ರದೀಪ್ ಮತ್ತು ಹೊಸಪೇಟೆಯ ಕರ್ನಾಟಕ ಬ್ಯಾಂಕ್ ಪ್ರಬಂಧಕ ಎನ್.ಎಸ್.ಪ್ರಸಾದ್ ನೇತೃತ್ವದಲ್ಲಿ ತೆರಳಿತ್ತು. ಈ ತಂಡದಲ್ಲಿ ಬೆಂಗಳೂರು ಗ್ರಾಮೀಣ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಪಟ್ಟಣದ ಪ್ರಗತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ 43 ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ತಂಡದ ಸದಸ್ಯರಿಗೆ 'ಯುವಶಕ್ತಿ ದೇಶದ ಶಕ್ತಿ. ಯುವ ಸಮೂಹ ಸಮಾಜ ಘಾತುಕ ಕೃತ್ಯಗಳಿಂದ ದೂರ ಇರಬೇಕು; ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತೊಡಗಬೇಕು' ಎಂದು ಡಾ॥ ಪ್ರದೀಪ್ ಕರೆ ನೀಡಿದರು. ನಂತರ, ಎನ್.ಎಸ್. ಪ್ರಸಾದ್ ಮಾತನಾಡಿ 'ವ್ಯಕ್ತಿತ್ವ ವಿಕಸನ, ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ, ಕ್ರೀಡಾ ತರಬೇತಿ, ಗಾಂಧೀಜಿ ಜೀವನ ಅಧ್ಯಯನ, ಖಾದಿ ಬಟ್ಟೆ ಧಾರಣೆ ಮತ್ತು ರಾಷ್ಟ್ರೀಯ ಭಾವೈಕ್ಯ ಚಟುವಟಿಕೆಗಳಲ್ಲಿ ಯುವಜನರು ತೊಡಗ ಬೇಕು' ಎಂದು ತಿಳಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಯುವ ಯೋಜನೆ ಮಾರ್ಗದರ್ಶನದಲ್ಲಿ ಯುವಜನರು ಸಮ್ಮೇಳನದಲ್ಲಿ ಭಾಗಿಯಾಗಿ, ಗ್ರಾಮ ಸ್ವರಾಜ್ಯದ ಮಹತ್ವ ಅರಿತರು; ಶ್ರಮದಾನ ಮಾಡಿದರು. ಒಂದು ದಿನ ನಮ್ಮ ರಾಜ್ಯದ ತಂಡವು ಜಾನಪದ ನೃತ್ಯ ಕಾರ್ಯಕ್ರಮ ದಲ್ಲಿ ತನ್ನ ಪ್ರತಿಭೆಯನ್ನು ತೋರಿತು. ■

(ಹಿಂದಿನ ಪುಟದಿಂದ)

ಅಚ್ಚುಕಟ್ಟಾಗಿ ನಿರ್ವಹಿಸಿದರು. ದೇಶಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿಯೂ, ಈ ಇಳಿ ವಯಸ್ಸಿನಲ್ಲಿ ದೇಶದ ಬಗ್ಗೆ ಅಪಾರ ಕಾಳಜಿಯಿಂದ ಚಿಂತನೆ ಹಂಚಿಕೊಳ್ಳಲು ಬಂದಿದ್ದ ಹಿರಿಯರಿಗೆ ಸೇವೆ ಮಾಡುವ ಸದವಕಾಶವನ್ನು ವಿದ್ಯಾರ್ಥಿ-ಯುವಜನರು ತಮ್ಮದಾಗಿಸಿಕೊಂಡರು. ಸಮ್ಮೇಳನದಲ್ಲಿ ಒಟ್ಟು 5000ಕ್ಕೂ ಹೆಚ್ಚು ಪ್ರತಿನಿಧಿಗಳು ಆಗಮಿಸಿದ್ದರು.

ಸಮ್ಮೇಳನವನ್ನು ಗಾಂಧೀಜಿಯವರ ಮೊಮ್ಮಗ ರಾಜಮೋಹನ ಗಾಂಧಿ ಉದ್ಘಾಟಿಸಿ, 'ಸ್ವಾತಂತ್ರ್ಯ ಹೋರಾಟದ ದಿನಗಳ ಬಗ್ಗೆ ಕೆಲವೊಂದು ತಪ್ಪು ಕಲ್ಪನೆಗಳನ್ನು ಮೂಡಿಸಲಾಗುತ್ತಿದೆ; ಗಾಂಧೀಜಿಯವರ ಹೋರಾಟವನ್ನೂ ತಪ್ಪಾಗಿ ಅರ್ಥೈಸುವ ಪ್ರಯತ್ನಗಳು ನಡೆದಿವೆ. ಈ ಕುರಿತು ನಾವೆಲ್ಲರೂ ಜಾಗರೂಕತೆಯಿಂದ ಇರಬೇಕಿದೆ. ವಿದ್ಯಾರ್ಥಿ-ಯುವಜನರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕಿದೆ' ಎಂದರು.

ವಿದ್ಯಾರ್ಥಿ-ಯುವಜನರ ಜೊತೆ ಹಿರಿಯ ಸರ್ವೋದಯ ಕಾರ್ಯಕರ್ತರಾದ ಡಾ॥ ಎಸ್.ಎನ್.ಸುಬ್ಬರಾವ್, ರಾಷ್ಟ್ರಮಟ್ಟದ ಹಿರಿಯ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್, ಕಾರ್ಯಕ್ರಮದ ಸಂಯೋಜಕ ಆದಿತ್ಯ ಪಟ್ನಾಯಕ್ ಮುಂತಾದವರು ಬೆರೆತು, ಮಾರ್ಗದರ್ಶನ ನೀಡಿದರು.

ಸಮ್ಮೇಳನದಲ್ಲಿ ದೊರೆತ ಅಮೂಲ್ಯ ಚಿಂತನೆಯ ಸಂಪತ್ತಲ್ಲದೆ, ವಿದ್ಯಾರ್ಥಿ-ಯುವಜನರು ಸೇವಾಗ್ರಾಮ ಆಶ್ರಮದ ಬಗ್ಗೆ, ಬಾಪು ನಿಸರ್ಗ ಚಿಕಿತ್ಸಾಲಯದ ಬಗ್ಗೆ, ಕುಷ್ಠರೋಗಿಗಳಿಗೆ ಬಾಪೂಜಿ ಮಾಡಿದ ಸೇವೆಯ ಬಗ್ಗೆ, ಗಾಂಧೀಜಿ ಕಾರ್ಯದರ್ಶಿ ಮಹಾದೇವ ದೇಸಾಯಿ ನೀಡಿದ ಕೊಡುಗೆಯ ಬಗ್ಗೆ, ಖ್ಯಾತ ಅರ್ಥಶಾಸ್ತ್ರಜ್ಞ ಜೆ.ಸಿ.ಕುಮಾರಪ್ಪ ಮತ್ತು ಆರ್ಯನಾರಾಯಣ್ ಪತ್ನಿ ಆಶಾ ನಾರಾಯಣ್ ದಂಪತಿಗಳು ಗಾಂಧೀಜಿಯವರಿಗೇನೆ ಪ್ರಾಥಮಿಕ ಶಿಕ್ಷಣದ ಮಹತ್ವ ಕುರಿತು ಮಾರ್ಗದರ್ಶನ ನೀಡಿದ ಬಗ್ಗೆ ಕುತೂಹಲಕಾರಿ ಮಾಹಿತಿಯನ್ನು ಪಡೆದುಕೊಂಡರು. ■



ಕೈ–ಉತ್ಪನ್ನಗಳಿಗೆ ತೆರಿಗೆ ವಿನಾಯ್ತಿ, ಒಳ್ಳೆಯ ಬೆಲೆ ಮತ್ತು ಸ್ವಾವಲಂಬಿ ಜೀವನಕ್ಕೆ ನೆರವಿಗಾಗಿ ಆಗ್ರಹಿಸಿ, ನಾಡಿನ ಸುಪ್ರಸಿದ್ಧ ಗಾಂಧಿವಾದಿ ರಂಗಕರ್ಮಿ ಪ್ರಸನ್ನ ಪಾದಯಾತ್ರೆ ನಡೆಸಿದರು. ಗದಗ್, ರಾಯಚೂರು, ಬಾಗಲಕೋಟೆ, ಯಾದಗಿರಿ, ಕಲಬುರ್ಗಿ, ವಿಜಯಪುರ, ಬೆಳಗಾವಿ ಜಿಲ್ಲೆಗಳ ಸಮಾನಮನಸ್ಕ 24ಕ್ಕೂ ಹೆಚ್ಚು ಸಂಘಟನೆಗಳ ಬೆಂಬಲ ಈ ಪಾದಯಾತ್ರೆಗೆ ದೊರಕಿತ್ತು

ದಿನಾಂಕ 26.01.2018ರಂದು ರಾಜ್ಯ ಮಟ್ಟದರಾಷ್ಟ್ರೀಯ ಸೇವಾ ಯೋಜನೆಯಸ್ವಯಂಸೇವಕರ ಪಥಸಂಚಲನ ಶಿಬಿರದ ಮುಕ್ತಾಯ ಸಮಾರಂಭವುಗಾಂಧೀ ಭವನದಲ್ಲಿ ನಡೆಯಿತು. ಗಾಂಧೀ ಸ್ಮಾರಕ ನಿಧಿಯಅಧ್ಯಕ್ಷರಾದಡಾ.ಹೂಡೆ ಪಿ.ಕೃಷ್ಣ ಅವರು ಸಮಾರೋಪ ಬಾಷಣ ಮಾಡಿದರು. ಸಮಾರಂಭದಲ್ಲಿಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾಕೃಷ್ಣಪ್ಪ, ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶಕರಾದಶ್ರೀ ಎ.ಎನ್.ಪೂಜಾರ್, ರಾಜ್ಯಎನ್.ಎಸ್.ಎಸ್. ಅಧಿಕಾರಿ ಹಾಗೂ ಜಂಟಿ ಕಾರ್ಯದರ್ಶಿಗಳಾದ ಡಾ.ಗಣನಾಥಎಕ್ಕಾರು ಉಪಸ್ಥಿತರಿದ್ದರು .





ಜನವರಿ ೩೦ ಸರ್ವೋದಯ ದಿನದಂದು ಶಾಂತಿ ಯಾತ್ರೆಯಲ್ಲಿ ಗಾಂಧಿ ಭವನಕ್ಕೆ ಬಂದ
ಬೆಂಗಳೂರಿನ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು

BAAPU PRAPANCHA
Kannada - English Magazine

Published at
Karnataka Gandhi Smaraka Nidhi,
Gandhi Bhavana, Kumara Park East
Bengaluru-560 001